# 1 ಪೇತ್ರ
# ಒಂದು ಪ್ರಸ್ತಾವನೆ

ಒಬ್ಬ ಲೇಖಕನು ತಾನಿರುವ ಸಮಯವನ್ನು ಪ್ರತಿಬಿಂಬಿಸುವದು ಅವಶ್ಯಕವಾಗಿದೆ. ಆತನು ಸರ್ವಕಾಲಿಕ ಸತ್ಯವನ್ನು ಕೊಟ್ಟಿದ್ದರು ಕೂಡ, ಅವುಗಳನ್ನು ಆತನು ಸಮಕಾಲೀನ ಜಗತ್ತಿನ ಸಂದರ್ಭಗಳ ಹಿನ್ನಲೆಯಲ್ಲಿ ಆತನು ಅವರಿಗೆ ಕೊಡುತ್ತಿದ್ದಾನೆ. ಲೇಖಕನು ಬರೆಯುವ ಪ್ರತಿಯೊಂದು ಕೆಲವು ಅಂಶದಲ್ಲಿ ಆತನ ಜಗತ್ತನ್ನು ಪ್ರತಿಬಿಂಬಿಸುವದಾಗಬಹುದು, ಆದರೆ ಆತನು ಸಾದರಪಡಿಸುತ್ತಿರುವ ದಾಖಲೆಯು ಪತ್ರವಾಗಿದ್ದಾದರೆ ಲೇಖಕನ ಮಾತುಗಳು ಆತನು ಇರುವಂಥ ಮತ್ತು ಆತನ ಆರಂಭಿಕ ಓದುಗರಿಗೂ ಕನ್ನಡಿಯಾಗುವಂಥ  ಆಶಯವನ್ನು ವೃದ್ಧಿಸುವವು ಆಗಿವೆ. ಪತ್ರದಲ್ಲಿ, ಸಾಮಾನ್ಯವಾದ ಅನುಭವ ಮತ್ತು ಪರಿಚಯ, ಅದೇ ಸ್ಥಳ ಮತ್ತು ಜನರನ್ನು ಬಲ್ಲಂಥವರನ್ನು ಹಂಚಿಕೊಳ್ಳಲು ಆತನು ಸಂಬೋಧಿಸುವಂಥದ್ದು ಒಬ್ಬ ಲೇಖಕನಿಗೂ ಮತ್ತು ವೀಕ್ಷಕರಿಗೂ ಒಂದು ಸಾಮಾನ್ಯವಾದ ನಿರೀಕ್ಷೆಯು ಇರುವುದಾಗಿದೆ. ಈ ಕಾರಣಕ್ಕಾಗಿ, ಲೇಖಕರ ಜಗತ್ತಿನ ಮೇಲೆ ಮತ್ತು ಅನುಭವದ ಮೇಲೆ ಪ್ರತಿಫಲಿಸಲು ಮೊದಲು ಓದುಗರಿಗೆ ಯಾವ ಅವಶ್ಯಕತೆಯೂ ಇರುವದಿಲ್ಲ ಅಥವಾ ಕನಿಷ್ಟಪಕ್ಷ ಕೇವಲ ತುಸುವಾದರೂ ಅವಶ್ಯಕತೆಯು ಇರುವುದಿಲ್ಲ. ಹೇಗೋ, ಲೇಖಕ ಅಥವಾ ಮೂಲ ವೀಕ್ಷಕರ ಜೊತೆಗೆ ವೈಯಕ್ತಿಕವಾಗಿ ಪರಿಚಯ ಇಲ್ಲದೇ ಇರುವ ತದನಂತರ ಓದುಗರಿಗೋಸ್ಕರ - ಇದು ಸಂಬಂಧಿಸಿದ ವಿಚಾರವಲ್ಲ.

ಹೆಚ್ಚಿನ ನಿಶ್ಚಿತತೆಯು ಮುಂಬರುವ ಪತ್ರದ, ನಂತರದ ಓದುಗರು ಇದನ್ನು ಉತ್ಪಾದಿಸಿದ ಸ್ಥಿತಿಯ ಸಮಯ ಮತ್ತು ಸ್ಥಿತಿಯಲ್ಲಿ ಬೇರೆಯಾಗಿದ್ದು, ಲೇಖಕನನ್ನು ಮತ್ತು ಆತನ ಮೊದಲ ಓದುಗರು ಹಂಚಿಕೊಂಡಿದ್ದನ್ನು ಅವರು ಅರ್ಥಮಾಡಿಕೊಳ್ಳುವ ಅವಶ್ಯಕತೆಯು ಅವರ ಪ್ರಜ್ಞಾಪೂರ್ವಕ ಶ್ರಮೆಯಾಗಿದೆ. ಇದು ಯಾವುದೇ ಪತ್ರವಾಗಿರಲಿ, ಪ್ರಾಚೀನ ಅಥವಾ ಆಧುನಿಕವಾಗಿರಲಿ, ದೈವಪ್ರೇರಿತವಾಗಿರಲಿ ಅಥವಾ ನಾಸ್ತಿಕವಾಗಿರಲಿ ಅದರ ಕುರಿತು ಇದು ಸತ್ಯವಾಗಿದೆ. ಆಧುನಿಕ ಓದುಗರು 1 ಪೇತ್ರವನ್ನು ಪ್ರವೇಶಿಸಿದಾಗ, ಅವರು ಶತಮಾನಗಳ ಸಮಯವನ್ನು ಮೀರಿ ಮತ್ತು ಸಾಂಕೃತಿಕ ಮೇರೆಗಳನ್ನು ಮೀರಿ ಅವುಗಳನ್ನು ಓದುವವ ರಾಗಿದ್ದಾರೆ. ಲೇಖಕರು ಯಾವಾಗ ಜೀವಿಸಿದ್ದನು, ಮತ್ತು ಕೈಯಲ್ಲಿರುವ ದಾಖಲೆಯನ್ನು ತಯಾರಿಸುವದರಲ್ಲಿ ಯಾವುದು ಪ್ರೇರೇಪಿಸಿತು ಎಂದು ಆತನ ಬಗ್ಗೆ ನಾವು ತಿಳಿದುಕೊಂಡಾಗ ಪತ್ರದ ನಮ್ಮ ಅರಿತುಕೊಳ್ಳುವಿಕೆಯು ಅದನ್ನು ಅನುಸರಿಸುವುದಾಗಿದೆ.

ವಾಕ್ಯಭಾಗಕ್ಕೆ ಇರುವಂಥ ಪ್ರಶ್ನೆಗಳನ್ನು ಸಹ ನಾವು 1 ಪೇತ್ರ ಪತ್ರಿಕೆಗೂ ತರಬಹುದು: ತನ್ನ ಮಾತುಗಳನ್ನು ಯಾರು ಓದಬೇಕೆಂದು ಬಯಸುವಂಥ ಮೊದಲ ಓದುಗರೊಡನೆ ಲೇಖಕನು ಯಾವ ತರದ ಸಂಬಂಧವನ್ನು ಇಟ್ಟುಕೊಂಡಿರಬಹುದು? ನಿರ್ದಿಷ್ಟವಾದ ಸಮಯದಲ್ಲಿ ಈ ನಿರ್ದಿಷ್ಟ ಜನರ ಬಗ್ಗೆ ಬರೆಯಲು ಲೇಖಕನಿಗೆ ಕಾರಣವಾದ ಸಂದರ್ಭಗಳು ಯಾವವು? ಲೇಖಕನ ಧಾರ್ಮಿಕ ನಂಬಿಗೆಗಳು, ಮೊದಲ ಓದುಗರು, ಮತ್ತು ಸುತ್ತಲಿನ ಸಂಸ್ಕೃತಿಗಳಿಗೆ ಯಾವದು ಮೇಲುಗೈಯಾಗಿದೆ? ಸಾಮಾಜಿಕವಾಗಿ ಅಸ್ತಿತ್ವದಲ್ಲಿರುವ ಸಂಪ್ರದಾಯಗಳು ಮತ್ತು ಜನರ ಸಂಪ್ರದಾಯಗಳಲ್ಲಿ ಯಾವದು ಪ್ರಚಲಿತದಲ್ಲಿ ಇದೆ? ಲೇಖಕನು ಮತ್ತು ಆತನ ಓದುಗರು ಸಾಮಾನ್ಯವಾಗಿ ಯಾವ ಭಾಷೆಯನ್ನು ಹಂಚಿಕೊಳ್ಳುತ್ತಿದ್ದರು? ಅವರ ಜಗತ್ತಿನ ಜನರು ಜೀವಿಸುವದನ್ನು ಹೇಗೆ ಮಾಡಿಕೊಳ್ಳುತ್ತಿದ್ದರು? ಅವರು ಯಾವ ತರದ ಸರಕಾರದ ಅಡಿಯಲ್ಲಿ ಇದ್ದರು? ಯಾವ ತರದ ಸಾಮಾಜಿಕ ಸಂಸ್ಥೆಗಳೊಡನೆ ಅವರು ಹಂಚಿಕೊಂಡಿದ್ದರು? ಇಂಥ

ಪ್ರತಿಯೊಂದು ಪ್ರಶ್ನೆಗಳು ಇಂತಹ ವಿಷಯಗಳನ್ನು ಹುಟ್ಟಿಸುವಂತವು ಆಗಿವೆ.

ಯಾವುದೇ ದಾಖಲೆಯು ದೂರದ ಸಮಯದಿಂದ ಮತ್ತು ಸ್ಥಳದಿಂದ ಬಂದದ್ದು ಎಂದು ನಾವು ಅರಿತುಕೊಳ್ಳಬೇಕಾದರೆ, ಈ ತರದ ಮಾಹಿತಿಗೋಸ್ಕರ ವಿಚಾರಣೆ ಮಾಡುವದು ಅವಶ್ಯವಾಗಿದೆ. ಇದು ಒಂದು ಪತ್ರಿಕೆಯಾಗಿದ್ದಾರೆ ಇದರ ವೈಯಕ್ತಿಕ ಸ್ವಭಾವ, ಇಂಥ ವಿಚಾರಣೆಯು ವಿಶೇಷವಾಗಿ ಪ್ರಮುಖವಾಗಿ ಇರುವುದಾಗಿರುತ್ತದೆ. 1 ಪೇತ್ರ ಪತ್ರಿಕೆಯು ಇತರ ಸಾಮಾನ್ಯ ಪತ್ರಿಕೆಗಳಿಂತಲೂ ಇದು ಅದೇ ತರದ ಪತ್ರಿಕೆಯಾಗಿದ್ದು ನಾವು ಬಯಸಿದ್ದಕ್ಕಿಂತಲೂ ಹೆಚ್ಚು ಔಪಚಾರಿಕವೂ, ಹೆಚ್ಚು ಕಾಳಜೀಪೂರಕವಾಗಿ ಜೋಡಿಸಿದ್ದು ಆಗಿದೆ. ಪೇತ್ರನು ಅವರಿಗೆ ಏನನ್ನು ಹೇಳಬೇಕೆಂದು ಬಯಸುತ್ತಾನೋ ಅದನ್ನು ಆ ರೀತಿಯಲ್ಲಿ ಅರ್ಥೈಸಿಕೊಳ್ಳಲು ನಾವು ಸಮರ್ಥರಾದರೆ ಆ ವಿಷಯದಲ್ಲಿ 1 ಪೇತ್ರದಲ್ಲಿ ಲೇಖಕನು ಹಂಚಿಕೊಂಡ ಮತ್ತು ಆತನು ಸಂಬೋಧಿಸಿದ ಜಗತ್ತಿನೊಡನೆ ಸಂಪೂರ್ಣವಾಗಿ ಸಿಲುಕತೊಡಗುತ್ತೇವೆ. ನಾವು ಏನನ್ನು ಅರಿಯಬೇಕೆಂದು ಬಯಸುತ್ತೇವೆ ಎಂಬುದನ್ನು ನಾವು ಅರಿತುಕೊಂಡಾಗ, ಪತ್ರದಲ್ಲಿರುವಂಥ ಇಂದಿನ ಕ್ರೈಸ್ತರಿಗೆ ನಿರ್ಧೇಶಿಸಲು ಬಯಸುವಂಥ ಸಮಾಲೋಚಿಸುವ ಮಾರ್ಗಗಳತ್ತ ಮಹತ್ವದ ಹೆಜ್ಜೆಯನ್ನು ನಾವು ತೆಗೆದುಕೊಳ್ಳುತ್ತೇವೆ.

## ಒಂದು ಪತ್ರ

ಕೆಲವರು ಏನೇ ವಾದಿಸಿದರೂ ಕೂಡಾ ಮೊದಲ ಪೇತ್ರ ಒಂದು ಪತ್ರಿಕೆಯಾಗಿದೆ. ದಾಖಲೆಯ ಮಹತ್ವದ ಭಾಗಗಳು ಮೂಲತಃವಾಗಿ ಪತ್ರದ ರೂಪದಲ್ಲಿ ಬರೆದವುಗಳು ಎಂದು ಕೆಲ ಪಂಡಿತರು ವಾದ ಮಾಡಿದರು, ಆದರೆ ಸೂಚನೆಯ ಕೈಪಿಡಿಯ ರೂಪದಲ್ಲಿ ಎಂದು ಹೇಳುತ್ತಾರೆ. ಇದು ವಿಚಾರಸರಣಿಯಂತೆಯೇ ಇದ್ದು, ಹೊಸದಾಗಿ ರೂಪಾಂತರವಾದ ಕ್ರೈಸ್ತರಿಗೆ ಪ್ರಯೋಜನವಾಗುವಂತಿದ್ದು ರೋಮದಲ್ಲಿ ಬರೆಯಲ್ಪಟ್ಟಿದೆ. ಇದು ಒಬ್ಬ ಕ್ರೈಸ್ತನೆಂದರೆ ಯಾರು ಎಂದು ವಿವರಿಸುವ ಮೂಲತಃವಾದ ದಾಖಲೆಯಾಗಿದ್ದು ಎಂದು ಹೇಳಲ್ಪಡುವದಾಗಿದೆ. 1 ಪೇತ್ರವು ಮೂಲತಃವಾಗಿ ಹೊಸದಾದ ರೂಪಾಂತರಿಗಳನ್ನು ದೀಕ್ಷಾಸ್ನಾನದ ಆಚರಣೆಯತ್ತ ನಡೆಸುವವರೆಗೂ ನಿರ್ಧೇಶನ ಮಾಡುವದಾಗಿದೆ ಎಂದು ಕೆಲವರು ವಾದಿಸುವವರಾಗಿದ್ದಾರೆ.[1] ಕೆಲ ಧರ್ಮಶ್ರದ್ಧೆಯುಳ್ಳ ಕ್ರೈಸ್ತರು ದಾಖಲೆಯನ್ನು ಪತ್ರದ ರೀತಿಯಲ್ಲಿ ಅಳವಡಿಸಿಕೊಂಡು, ಅದಕ್ಕೆ ಅಪೊಸ್ತಲನಾದ ಪೇತ್ರನ ಹೆಸರನ್ನು ಇಟ್ಟರು, ಮತ್ತು ಅದನ್ನು ವಿಶಾಲವಾದ ಶೋತ್ರುಗಳಿಗೆ ಹಂಚಿದರು ಎಂದು ನಂತರದ ವಿಚಾರಸರಣಿಯು ಸಾಗುವುದಾಗಿದೆ. ಪ್ರಾಮಾಣಿಕವಾಗಿ, ವಿಚಾರಸರಣಿಗೆ ಸತ್ಯವೇದದ ಪಂಡಿತರಿಂದ ಯಾವುದೇ ರೀತಿಯ ಬೆಂಬಲವೂ ಎಂದಿಗೂ ಸಿಕ್ಕಿಲ್ಲ. ಕಾಲದಿಂದ ಕಾಲಕ್ಕೆ, ಹೆಚ್ಚಾದ ಉದಾರಮತವಾದಿ ಪಂಡಿತರು ಇದನ್ನು ತಿರಸ್ಕರಿಸಿದ್ದು ಉಂಟು. ಅದಕ್ಕೆ ಕಾರಣಗಳನ್ನು ಕಂಡುಕೊಳ್ಳುವದು ಕಷ್ಟಸಾಧ್ಯವಲ್ಲ.

ಸ್ಫೂರ್ತಿಯ ಪ್ರಶ್ನೆಯು ಒಂದು ಬದಿಯಿಟ್ಟು, ರೋಮಾದಲ್ಲಿ ಬರೆಯಲ್ಪಟ್ಟಂಥ ಪೇತ್ರನ ಪತ್ರದಿಂದ ಸೂಚನಾತ್ಮಕ ಅಥವಾ ದೀಕ್ಷಾಸ್ನಾನದ ದಾಖಲೆಯನ್ನು ಮರೆಮಾಚುವ ಮತ್ತು ಏಷಿಯಾ ಮೈನರ್ ಉದ್ದಕ್ಕೂ ಇರುವ ಸಭೆಗಳಿಗೆ ಇದು ಹಂಚುವ ಉದ್ದೇಶವಾದರೂ ಏನು ಎಂದು ಕಲ್ಪಿಸುವದು ಕಷ್ಟ ಸಾಧ್ಯ. ಮೊದಲ ಓದುಗರು ಇದನ್ನು ದೀಕ್ಷಾಸ್ನಾನದ ಆಚರಣೆಗೆ ಮಾರ್ಗದರ್ಶನವಾಗಿ ಇದನ್ನು ಬಳಸಲಿ ಎಂಬ ಉದ್ದೇಶದಿಂದ 1 ಪೇತ್ರವನ್ನು ಯಾರಾದರು ಕಳುಹಿಸಿದ್ದಾದರೆ, ಇದನ್ನು ಪತ್ರವೆಂದು ರಹಸ್ಯವಾಗಿ ಇರಿಸಲು ಯಾಕೆಂದು ನನಗೆ ಕಲ್ಪನೆ ಮಾಡಲಿಕ್ಕಾಗದು. ಪತ್ರವೆಂದು ಕಾಣಲ್ಪಡುವದು ನಿಜವಾಗಿಯೂ ದೀಕ್ಷಾಸ್ನಾನದ ಆಚರಣೆಯ ವಿವರಣೆಯು ಒಂದು ರೂಪವಾಗಿದೆ ಎಂದು ಆ ವ್ಯಕ್ತಿಗಳು ಆರಂಭಿಕ ಓದುಗರು ಎಂದು ಅರಿತುಕೊಳ್ಳುವದನ್ನು ಕಳಿಸಿಕೊಟ್ಟವರು ಅಪೇಕ್ಷಿಸುವದು ಹೇಗೆ ಸಾಧ್ಯ? ಇದನ್ನು ಪ್ರತಿಪಾದಿಸುವವರು ಇದಕ್ಕೆ ತೃಪ್ತಿಕರವಾದ ವಿವರವನ್ನು ನೀಡಿರುವದಿಲ್ಲ.

1 ಪೇತ್ರದ ಈ ಸಂಬೋಧನೆಗಳು, ಉಪದೇಶಗಳು, ಸಮಾಧಾಕರವಾದ ಮಾತುಗಳು,

ನೆನಪಿಸುವಂಥವುಗಳು ಮತ್ತು ಸಮಾರೋಪಗಳೆಲ್ಲವೂ ಪ್ರಾಚೀನ ಪತ್ರದಲ್ಲಿ ಸಹಜವಾಗಿ ಸಿಕ್ಕುವಂಥವುಗಳು ಆಗಿವೆ. ಇದಕ್ಕೆ ಜೊತೆಯಾಗಿ, 1 ಪೇತ್ರ ಪತ್ರಿಕೆಯಲ್ಲಿ ಪತ್ರದ ರೂಪವನ್ನು ಬಿಟ್ಟರೆ ಆದಿ ಸಭೆಯ ಸಂಪ್ರದಾಯಗಳಲ್ಲಿ ಏನೂ ಸಿಕ್ಕುವದಿಲ್ಲ. ಪತ್ರವೆನ್ನಿಸಿಕೊಳ್ಳುವದಕ್ಕಿಂತಲೂ ಹೆಚ್ಚಿನ ಎಲ್ಲವನ್ನೂ 1 ಪೇತ್ರ ಹೊಂದಿದೆ ಎಂದು ನಂಬುವುದಕ್ಕೆ ಯಾವ ಕಾರಣಗಳು ಇಲ್ಲ. ಹೇಗೂ, 1 ಪೇತ್ರ ದೀಕ್ಷಾಸ್ನಾನದ ಮತ್ತು ಪ್ರಶ್ನೋತ್ತರ ವಿವರಣೆ ಮಾಲದಂತಹ ಅನಪೇಕ್ಷಿತ ಫಲಗಳನ್ನು ಉತ್ಪತ್ತಿಮಾಡುವುದಾಗಿದೆ ಎಂದು ಯಾರಾದರೂ ಊಹಿಸಬಹುದಾಗಿದೆ. ಕ್ರಿಸ್ತೀಯತ್ವ - ಅರಿತುಕೊಳ್ಳುವಿಕೆಯ ಪ್ರಜ್ಞೆಯ ದೀಕ್ಷಾಸ್ನಾನದ ಮಹತ್ವದೆಡೆಗೆ ಲಕ್ಷವನ್ನು ಸೆಳೆಯುವುದಾಗಿದೆ.

ಆದಿಕ್ರೈಸ್ತರು ತಮ್ಮ ರೂಪಾಂತರದ ಅನುಭವವನ್ನು, ತಮ್ಮ ದೀಕ್ಷಾಸ್ನಾನದ ಅಂಶಗಳನ್ನು ನೆನಪಿಸಿಕೊಳ್ಳುವಾಗ ಇದು ನಿಜವಾಗಿದ್ದು, ಪ್ರೋತ್ಸಾಹದ ಮೂಲದ ನಿರಂತರತೆಯನ್ನು ಮತ್ತು ನಂಬಿಗಸ್ತಿಕೆಗಾಗಿ ಪ್ರೇರಣೆಯನ್ನು, ದೈವೀಯ ಜೀವಿತವನ್ನು ಅವರಿಗೆ ಕೊಡುವದಾಗಿದೆ. "ಪುನರ್‌ಜನ್ಮವನ್ನು ಸೂಚಿಸುವ ಸ್ನಾನ" ಎಂಬ ಪೌಲನ ಮಾತುಗಳು (ತೀತ 3:5) ಬಳಿಕೆಯು, ಸಾಮಾನ್ಯವಾಗಿ ಗುರುತಿಸಲ್ಪಟಂಥ ಆಧುನಿಕ ವ್ಯಾಖ್ಯಾನಕಾರರಿಗಿಂತಲೂ ಪೇತ್ರನ ಸಂದೇಶ ಹೆಚ್ಚಾಗಿ ಸಂಜಸವಾಗಿದೆ. ದೀಕ್ಷಾಸ್ನಾನದ ಆಚರಣೆಯ ಮಾರ್ಗದರ್ಶನದಂತ ಯಾವುದೇ ದಾಖಲೆಗಳ ಸ್ಥಾಪನೆ ಯಾವ ಕುರುಹು ಅಲ್ಲಿರದಿದ್ದರೂ ಕೂಡಾ ಅದು ನಿಜವಾದದ್ದಾಗಿದೆ. ರೂಪಾಂತರ/ದೀಕ್ಷಾಸ್ನಾನದ ಬಗ್ಗೆ ಅನೇಕ ಆಧಾರಗಳನ್ನು ಪೇತ್ರನು ತನ್ನ ಓದುಗರಿಗೆ ಮಾಡಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವದು ಕಷ್ಟಸಾಧ್ಯವಾದದ್ದು (1:3, 23; 2:1, 2; 3:21). ತಮ್ಮ ದೀಕ್ಷಾಸ್ನಾನದ ಬಗ್ಗೆ ಯೋಚಿಸದೇ ಕ್ರಿಸ್ತನಲ್ಲಿ ತಮ್ಮ ರೂಪಾಂತರದ ಬಗ್ಗೆ ಯೋಚಿಸುವದು ಇದು ಪೇತ್ರನಿಗೂ ಅಥವಾ ಆತನ ಮೊದಲ ಓದುಗರಿಗೂ ಹೊರತಾದ ಪ್ರಶ್ನೆಯಾಗಿತ್ತು.

## ಪತ್ರದ ಐಕ್ಯತೆ

1 ಪೇತ್ರ ಪತ್ರಿಕೆಯು ಏಕೀಕೃತವಾದ ಪತ್ರಿಕೆಯಾಗಿದೆಯೋ ಅಲ್ಲವೋ, ಅದು, ಒಂದು ಸಂದರ್ಭದಲ್ಲಿ ಒಬ್ಬ ಲೇಖಕನಿಂದ ಬರೆಯಲ್ಪಟ್ಟದ್ದಾಗಿದೆಯೋ ಇಲ್ಲವೊ ಎಂದು ಕೇಳುವದು ಮಹತ್ವದ್ದಾಗಿದೆ. ಪುಸ್ತಕದ ಐಕ್ಯತೆಯ ಬಗ್ಗೆ ಎತ್ತಲಾದ ಪ್ರಶ್ನೆಗಳು ಸಾಮಾನ್ಯವಾಗಿ 1 ಪೇತ್ರ 4:12ರ ಸುತ್ತಲೂ ತಿರುಗುವವು ಆಗಿವೆ. ಮೊದಲ ಪೇತ್ರ 4:11 ಇದು ಒಂದು ಅಂತ್ಯಾಶೀರ್ವಾದ, ಸ್ತುತಿಯ ಹೇಳಿಕೆ, ಅದರಂತಿರುವ ಸಹಜವಾಗಿ ಪತ್ರದ ಅಂತ್ಯದಲ್ಲಿ ಅಥವಾ ಅದರ ಅಂತ್ಯದ ಹತ್ತಿರದಲ್ಲಿಯಾದರೂ ಕಂಡುಬರುವಂತದ್ದೂ ಆಗಿದೆ. ಇದಕ್ಕೆ ಜೊತೆಯಾಗಿ, ಓದುಗರ ವಿವರಣೆಯ 4:12-19ರಲ್ಲಿನ ಕಷ್ಟಗಳು ಪುಸ್ತಕದಲ್ಲಿ ಇನ್ನೆಲ್ಲಿಯೂ ಸಿಕ್ಕುವದಕ್ಕಿಂತ ಹೆಚ್ಚಾಗಿ ಹೆಚ್ಚು ವಿಸ್ತರಿಸಲ್ಪಟ್ಟವೂ ಮತ್ತು ಹೆಚ್ಚು ಉದ್ದೇಶಪೂರಕವೂ ಆಗಿರುವವು ಆಗಿವೆ. 1 ಪೇತ್ರದ ಒಂದು ಭಾಗವು ಮಾತ್ರ 4:12-5:14ರ ಹಾಗೆ ಸಹಜ ಪತ್ರದ ಹಾಗೆ ಆರಂಭಗೊಳ್ಳುವದನ್ನು ಕಾಪಾಡಿಕೊಂಡಿದೆ. ಕೆಲಕಾಲ ನಂತರದಲ್ಲಿ, ಹೀಗೆ ವಾದಗಳು ಸಾಗುವಾಗ, ಹಿಂದೆ ವರ್ಣಿಸಿದ ದೀಕ್ಷಾಸ್ನಾನದ ದಾಖಲೆಯೆಂದು ಭಾವಿಸಿ ಕೆಲವರು 4:12-5:14ನ್ನು ಸೇರಿಸಿದರು ಮತ್ತು ಅದನ್ನು ಅಪೊಸ್ತಲನಾದ ಪೇತ್ರನ ಹೆಸರಿನಲ್ಲಿ ಕಳುಹಿಸಿದರು.

ಹತ್ತಿರದಿಂದ ಪರೀಕ್ಷಿಸಿದಾಗ ಅವಶೇಷಗಳು ಮತ್ತು ತುಣುಕುಗಳು ವಿಫಲವಾಗುವಂತೆ 1 ಪೇತ್ರ ಆರಂಭವಾಗುತ್ತದೆ. ಮೊದಲನೆಯದಾಗಿ, ಅಂತ್ಯಾಶೀರ್ವಾದವು ಕೇವಲ ವಿವರಣೆಯ ಅಂತ್ಯದಲ್ಲಿ ಕಂಡುಬರಬೇಕು ಎಂಬ ನಿಯಮವೇನಿಲ್ಲ. ಪೌಲನು 1 ತಿಮೋಥೆ 6:15, 16ರಲ್ಲಿ ತನ್ನ ಒಂದು ಬಲು ಸುಂದರವಾದ ಅಂತ್ಯಾಶೀರ್ವಾದವನ್ನು ಬರೆದಿದ್ದಾನೆ ಮತ್ತು ನಂತರ ತನ್ನ ಪತ್ರವನ್ನು ಆರಂಭಿಸಿದ್ದಾನೆ. ಎಫೆಸದ ಅರ್ಧಭಾಗದಲ್ಲಿ, ಪೌಲನು ಅಂತ್ಯಾಶೀರ್ವಾದದ ಸ್ತೋತ್ರಕ್ಕಾಗಿ ನಿಂತುಕೊಂಡನು (ಎಫೆಸ 3:20, 21). ಮುಂದೆ, 1 ಪೇತ್ರ 4:12-19ರಲ್ಲಿ

ಕಷ್ಟದ ವಿವರಣೆಯು ಉಲ್ಬಣತೆಯು ಇದ್ದಾಗ, ಪತ್ರದಲ್ಲಿ ಹಿಂದೆ ಆತನು ತನ್ನ ಓದುಗರಿಗೆ ಬರೆಯುವಾಗ ನಂಬಿಕೆಯು "ಬೆಂಕಿಯಲ್ಲಿ ಪರೀಕ್ಷಿಸಲ್ಪಟ್ಟಿತು" ಎಂದು ಗಂಭೀರವಾದ ಕಷ್ಟವನ್ನು ಪ್ರಸ್ತಾಪಿಸಿದ್ದಾನೆ (1:7).

1 ಪೇತ್ರ ಪತ್ರಿಕೆಯು ಹುಟ್ಟು ಎರಡು ಅಥವಾ ಮೂರು ವಿವರಣೆಗಳು ಒಟ್ಟಾಗಿ ಜೋಡಣೆಯಾಗಿದ್ದು ನಿರ್ಧಿಷ್ಟವಾದ ವಾದದ ಮೇಲೆ ಮೂಲವಾಗಿರುವ ಒಂದು ಪತ್ರದಲ್ಲಿ ಕಾಣಿಸಿಕೊಂಡಿದೆ ಎಂಬ ಕಲ್ಪನೆಯು ಇದೆ. ಅದನ್ನು ನಿಜವೆಂದು ಒಪ್ಪಿಕೊಳ್ಳುವಂಥ ಯಾವುದೇ ಬಲವಾದ ಕಾರಣಗಳು ಇಲ್ಲ. ಪೇತ್ರನು 4:12-5:14ನ್ನು ತನ್ನ ಪತ್ರದಲ್ಲಿ ಸೇರಿಸಿದಾದರೆ ನಂತರದಲ್ಲಿ ತನ್ನ ಕೇಳುಗರೊಳಗಿನ ಸಂಕಟದ ಹೊಸ ಕಾಣಿಸಿಕೊಳ್ಳುವಿಕೆಯನ್ನು ಆತನು ತಿಳಿದಿರುವಂಥ ಸಾಧ್ಯತೆಯೂ ಅಲ್ಲಿ ಇದೆ, ಆದರೆ ಅದು ಅನಿಶ್ಚಿತವೂ ಕೂಡಾ ಆಗಿರಬೇಕು. 4:12-5:14ರ ಸೇರಿಸುವಿಕೆಯು ಅಪೊಸ್ತಲನಿಗೆ ಹೊಸದೊಂದು ಮಾಹಿತಿಯು ಬಂದದ್ದರಿಂದ ಆತನು ಅದನ್ನು ಎರಡನೆಯ ಬರವಣಿಗೆಯಲ್ಲಿ ಸೇರಿಸಿದ್ದು ಎಂದಾದರೆ, ಇದು ಕೇವಲ ದೂರದ ಐಕ್ಯತೆಯನ್ನು ದೂರವಾಗದು.

## ಪತ್ರದ ಸಂದರ್ಭ

ಲೇಖಕನು ಯಾಕೆ ಬರೆದನು ಎಂದು ಅರಿವನ್ನು ಹೊಂದುವದಕ್ಕಿಂತ ಹೆಚ್ಚಾಗಿ ಪತ್ರವನ್ನು ಅರಿತುಕೊಳ್ಳುವದು ಅಲ್ಲಿ ಹೆಚ್ಚು ಮಹತ್ವದ್ದಾಗಿದೆ. ಪೇತ್ರನು ಯಾಕೆ ಬರೆದನು? ಆತನಿಗೆ ಬರೆಯಲು ಕಾರಣವಾದ ಯಾವ ಸ್ಥಿತಿಗಳು ಆತನ ಮೊದಲ ಓದುಗರಲ್ಲಿ ಪ್ರಭುತ್ವವನ್ನು ಪಡೆದಿವೆ? 1 ಪೇತ್ರದ ಸಾಮಿಪ್ಯದ ಓದುವಿಕೆಯು, ಸತ್ಯವೇದದ ಹೊರಗಿನ ಐತಿಹಾಸಿಕ ಮಾಹತಿಯೊಡನೆ ಜೊತೆಗೂಡಿದ್ದು, ಆ ಪ್ರಶ್ನೆಗಳಿಗೆ ನಮಗೆ ಉತ್ತರಿಸುವುದಾಗಿದೆ. ಕಿರಿದಾದ ಐದು ಅಧ್ಯಾಯಗಳ ಜಾಗರೂಕನಾದ ಓದುವಿಕೆಯು ಒಂದು ಮಹತ್ವವಾದ ಗಮನಿಸುವಿಕೆಯತ್ತ ನಡೆಸುವುದಾಗಿದೆ: ಆತನ ಓದುಗರ ಕಷ್ಟಪಡುವಿಕೆಯು ಅಪೊಸ್ತಲನು ಯಾಕೆ ಬರೆದನು ಎಂಬುದರೊಂದಿಗೆ ದೊಡ್ಡ ಒಪ್ಪಂದವನ್ನು ಹೊಂದಿದೆ. ಕಷ್ಟಪಡುವಿಕೆ, ವಾಸ್ತವವಾಗಿ, ಕೆಂಪುಬಣ್ಣದ ದಾರದಂತೆ ಪತ್ರದುದ್ದಕ್ಕೂ ಓಡುತ್ತಾ ಸಾಗುತ್ತದೆ.

1 ಪೇತ್ರದ ದಿನಾಂಕವನ್ನು ಅದು ಅನುಸರಿಸುವದಕ್ಕಿಂತ ಹೆಚ್ಚಾಗಿ ನಾವು ಪರಿಶೋಧಿಸುವವರಾಗಿದ್ದೇವೇ, ಆದರೆ ಪೇತ್ರನು ಈ ಪತ್ರವನ್ನು ಬಹುಶಃ ಮೊದಲ ಶತಮಾನದ 60 ಮಧ್ಯದಲ್ಲಿ ಬರೆದಿರಬಹುದು ಎಂದು ಈಗ ನಾವು ಹೇಳುವವರಾಗಿದ್ದೇವೆ. ಅದು ನಿಜವಾಗಿ ಇದ್ದು, ಆತನ ಕೆಲ ಓದುಗರು ದಶಕಗಳಿಂದ ಅಥವಾ ಇನ್ನೂ ಹಿಂದಿನಿಂದ ಕ್ರೈಸ್ತರಾಗಿರುವ ಸಾಧ್ಯತೆಯು ಇದೆ. ಅವರಲ್ಲಿ ಕೆಲವರು ಕ್ರಿಸ್ತನಿಗೆ ಬೆನ್ನು ತಿರುಗಿಸಿದರೂ ಇರುವುದನ್ನು ಹೆಚ್ಚಿನ ಸಮಯದಲ್ಲಿ ಅವರು ಕಾಣುವವರಾಗಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ, ಇನ್ನೂ ನಂಬಿಗಸ್ತರಾಗಿ ಉಳಿದವರು ಚೆನ್ನಾಗಿ ಮುಂದುವರೆಯದೇ ಇದ್ದವರೂ ಆಗಿದ್ದಾನೆ. ಕೆಲವರು ನಿರಾಶೆಗೊಂಡರು; ಅವರ ನಂಬಿಕೆಯು ಅಲುಗಾಡುತ್ತಿತ್ತು. ಅವರ ಕ್ರಿಸ್ತೀಯ ಅನುಭವದಲ್ಲಿ ಸಾಂಘಿಕವಾಗಿ ಒಂದುಗೂಡುವಲ್ಲಿ ಕಷ್ಟಪಡುತ್ತಿರುವ ತನ್ನ ಓದುಗರಿಗೆ ಸಹಾಯಿಸಲು ಪೇತ್ರನು ಬರೆಯುತ್ತಿದ್ದಾನೆ. ಅವರು ಎದುರಿಸುತ್ತಿರುವ ಸಂಕಟಗಳನ್ನು ವಿವರಿಸುವದು ಆತನಿಗೆ ಸರಳವಾದದ್ದೇನಾಗಿರಲಿಲ್ಲ, ಆದರೆ ದೇವರು ಈ ಜಗತ್ತಿನಲ್ಲಿ ತನ್ನ ಚಿತ್ತವನ್ನು ಮೀರಿ ಕಾರ್ಯವನ್ನು ಮಾಡುತ್ತಿದ್ದಾನೆ ಎಂಬುದನ್ನು ಅವರ ಅರಿವಿಗೆ ತರುವದು ಬಲು ಮಹತ್ವದ್ದು ಆಗಿತ್ತು. ಕೆಲ ಸಂಗತಿಗಳಲ್ಲಿ ಸಂಕಟವು ಆತ್ಮೀಕ ಸಹಾಯಕನಾಗಿ ಕಂಡುಬರುತ್ತದೆ ಎಂದು ಸೂಚಿಸುವಷ್ಟು ಅಪೊಸ್ತಲನು ಧೈರ್ಯಶಾಲಿಯಾಗಿದ್ದನು (1:7).

ಯೇಸುವನ್ನು ಕರ್ತನೆಂದು ಅರಿಕೆಮಾಡುವಲ್ಲಿ ತನ್ನ ಕ್ರಿಸ್ತೀಯ ಸಹೋದರ ಹಾಗೂ ಸಹೋದರಿಯರು ಭಾರವಾದ ಬೆಲೆಯನ್ನು ತೆತ್ತುತ್ತಿದ್ದಾರೆ ಎಂಬ ಕಾರಣದಿಂದ ಅಪೊಸ್ತಲನು ಕಾಳಜಿಯುಳ್ಳವನಾಗಿದ್ದನು. ದೇವರು ಸಂಕಟವನ್ನು ನಿವಾರಿಸಲು

ಸಮರ್ಥನಾಗುವನೇ ಎಂಬುದರ ಬಗ್ಗೆ ಆತನಿಗೆ ಯಾವ ಪ್ರಶ್ನೆಯೂ ಇರಲಿಲ್ಲ. ತನ್ನ ಚಿತ್ತವನ್ನು ಮೀರಿ ಕಾರ್ಯಮಾಡುವ ದೇವರ ರಹಸ್ಯದಲ್ಲಿ ಆತನು ಯಾಕೆ ಮುಚ್ಚಿಡಲಿಲ್ಲ. ದೇವರು ಸಂಕಟಕ್ಕೆ ಕಾರಣ ಆಗದಿದ್ದಾಗ, ಆತನು ತನ್ನ ಉದ್ದೇಶವನ್ನು ಮೀರಿ ಸಂಕಟಗಳ ಮೂಲಕ ಕಾರ್ಯಮಾಡಲು ಸಮರ್ಥನಾಗಿದ್ದಾನೆ. ಮಾನವನ ತಿರುಗಿ ಬೀಳುವಿಕೆಯನ್ನು ಮತ್ತು ಪಾಪವನ್ನು, ದಿವ್ಯ ಉದ್ದೇಶಕ್ಕಾಗಿ ದೈವೀಕವಾಗಿ ಕಾರ್ಯಮಾಡುವವರಲ್ಲಿ ಸಂಕಟಪಡುವ ಅಂಷದಲ್ಲೂ ಕೂಡಾ ದೇವರು ತಳ್ಳಿಹಾಕಲು ಸಮರ್ಥನಾಗಿದ್ದಾನೆ. ಯೇಸುವಿನ ಸಂಕಟವು ಇದಕ್ಕೆ ಒಂದು ಉದಾಹರಣೆಯಾಗಿ ನಿಂತಿದೆ (2:21; 3:17, 18; 4:13). ಕರ್ತನು ಸಂಕಟಪಟ್ಟದ್ದರಿಂದ, ಆತನ ಜನರೂ ಸಹ ಸಂಕಟಪಡುವದನ್ನು ಅಚ್ಚರಿದಾಯಕವಾದದ್ದು ಎಂದು ಯೋಚಿಸುವವರು ಯಾರು?

ನಾಲ್ಕು ಬಾರಿ ಪತ್ರದ ಕ್ರಮದಲ್ಲಿ, ಪೇತ್ರನು ತನ್ನ ಓದುಗರ ಸಂಕಟವನ್ನು ನೇರವಾಗಿ ಸಂಬೋಧಿಸಿದ್ದಾನೆ (1:6-9; 3:13-17; 4:12-19; 5:9, 10). ವಿಶ್ವಾಸಿಗಳು ಸೆರೆಮನೆಯಲ್ಲಿ ಇರುವದನ್ನು ಮತ್ತು ಹಿಂಸೆಗೊಳಗಾಗುವದನ್ನು ಸೂಚಿಸುವ ಪದಗಳು ಕಂಡುಬರುವದಿಲ್ಲ. ಬದಲಾಗಿ, ಅನಿರೀಕ್ಷಿತ ಅಸಂತುಷ್ಟಿ, ಅಸಹನೆ, ಮತ್ತು ಅಕ್ರೈಸ್ತ ನೆರೆಯವರಿಂದ ಅಥವಾ ಬಹುಶಃ ನಮ್ಮ ಕುಟುಂಬದವರಿಂದ ದೂಷಣೆಯ ಅಡಿಯಲ್ಲಿ ಸಿಲುಕಿಕೊಂಡಿರುವಂತೆ ಕಾಣುತ್ತದೆ. ತನ್ನ ಓದುಗರು ಅನುಭವಿಸುತ್ತಿರುವ ಸಂಕಟದ ರೀತಿಯನ್ನು ಪೇತ್ರನು ಎಲ್ಲಿಯೂ ನಿರ್ಧಿಷ್ಟಿಕರಿಸಿಲ್ಲ, ಆದರೆ ಅಲ್ಲಿ ಕೆಲ ಸೂಚನೆಗಳು ಇವೆ. 2:12 ಮತ್ತು 3:16ರಲ್ಲಿ, ಒಳ್ಳೆಯವರಾಗಿ ಇರುವುದನ್ನು, ಪ್ರಾಮಾಣಿಕ ಜೀವಿತವನ್ನು ಒತ್ತಿಹೇಳಿದ್ದು, ಇದರಿಂದ ಅವರು ದೂಷಣೆಗೆ ಒಳಗಾದಾಗ ಅವರ ದಾಷಕರು ತಲೆಬಾಗಿಸಬಹುದಾಗಿದೆ. ಅವರ ಸಂಕಟದ ಭಾಗವು ಅವಿಶ್ವಾಸಿಗಳಿಂದ ಅವರು ಪಡೆದ ದೂಷಣೆಯೇ ಎಂಬುದು ಆ ಸಲಹೆಯಾಗಿದೆ. 4:4ರಲ್ಲಿ, ಕ್ರೈಸ್ತರು ವಿಗ್ರಹಾರಾಧನೆಯ ನಡವಳಿಕೆಯಿಂದ ಬೆನ್ನು ತಿರುಗಿಸಿದ್ದ ಕಾರಣದಿಂದ ಅವರ ಅವಿಶ್ವಾಸಿ ನೆರೆಯವರು ಅಚ್ಚರಿಗೊಳ್ಳುತ್ತಾರೆ ಎಂದು ಆತನು ಹೇಳುತ್ತಾನೆ. ಈ ಕಾರಣದಿಂದ ಅವರ ನೆರೆಯವರು ಅವರನ್ನು ತೆಗಳಿದರು.

ಪೇತ್ರನ ಓದುಗರ ತತ್‌ಕ್ಷಣದ ಸಂಕಟವು ಜೀವಬೆದರಿಕೆಗೆ ಸಂಬಂಧಪಟ್ಟಿದ್ದಲ್ಲ ಅಥವಾ ಅಧಿಕೃತವಾದದ್ದಕ್ಕೆ, ಅಧಿಕಾರಿಗಳಿಗೆ ಸಂಬಂಧಪಟ್ಟಿದ್ದೂ ಅಲ್ಲ. ಇನ್ನೂ ಸರಕಾರದ ಅಧಿಕಾರಿಗಳ ಹಿಂಸೆಯು ಸಾಧ್ಯತೆಯ ಸೂಚನೆಯು ಪತ್ರದಲ್ಲಿ ಇದೆ. ಅಧಿಕಾರಿಗಳನ್ನು ಗೌರವಿಸಿರಿ ಎಂದು ಪೇತ್ರ ಒತ್ತಿ ಹೇಳುವಾಗ (2:13-17), ಆತನು ನಿಜವಾದ ಸಮಸ್ಯೆಯನ್ನು ಸಂಭೋದಿಸುತ್ತಿರಬಹುದು. ಅಧಿಕಾರಿಗಳು ವಿಶ್ವಾಸಿಗಳನ್ನು ಪರಿಶೋಧಿಸುತ್ತಿರಬಹುದು ಮತ್ತು ಯಾವುದೇ ದುರ್ದೆಶೆಗಾಗಿ ಅಥವಾ ಅಲ್ಲಿ ಸಂಭವಿಸಿದ ಅಪರಾಧಕ್ಕಾಗಿ ದೂಷಿಸುತ್ತಿರಬಹುದು. ಪ್ರಾಚೀನ ಕಾಲದಲ್ಲಿ, ಆಧುನಿಕ ಕಾಲದಲ್ಲಿದ್ದಂತೆ, ಒಂದು ಹೊಸ ಧರ್ಮವು ಸಂಶಯದ ಅಡಿಯಲ್ಲಿ ಬರಬಹುದಾಗಿತ್ತು.

ರೋಮದಲ್ಲಿನ ಅಧಿಕಾರಿಗಳ ಅಧಿಕಾರಶಾಹಿತ್ವವು ಕ್ರೈಸ್ತತ್ವದ ಮೇಲೆ ಹೆಚ್ಚು ಗಮನ ಹರಿಸಿದ್ದರು ಎಂಬುದಕ್ಕೆ ಯಾವ ಪುರಾವೆಯು ಇಲ್ಲ. ಹಿಂದಿನ ಸಮಯದಲ್ಲಿಯೇ, ಯಾವುದೇ ಮಟ್ಟದಲ್ಲಿಯ ಕ್ರೈಸ್ತರ ಹಿಂಸೆಯು ಆಳುತ್ತಿರುವ ಅಧಿಕಾರಿಗಳಿಂದ ಅಂದರೆ ಸ್ಥಳೀಯ ಪಟ್ಟಣದ ನ್ಯಾಯಾಧೀಶರುಗಳಿಂದ ಬರುತಿತ್ತು ಹೊರತು, ಚಕ್ರವರ್ತಿಗಳು ಅಥವಾ ಅಧಿಕಾರಿಗಳಿಂದ ಅಲ್ಲ. ಸ್ಥಳೀಯ ಅಧಿಕಾರಿಗಳು ಕ್ರೈಸ್ತರು ತಮ್ಮ ಉತ್ಪಾದನೆಗಳನ್ನು ಮಾರುಕಟ್ಟೆಯಲ್ಲಿ ಮಾರಲು ಅಥವಾ ನಾಗರೀಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವದಕ್ಕೆ ಅವರಿಗೆ ತೊಂದರೆಯನ್ನು ಉಂಟುಮಾಡುತ್ತಿದ್ದರು. ಆರ್ಥಿಕ ಪ್ರತಿಕಾರ ಮತ್ತು ಸಾಮಾಜಿಕ ಅಪವಾದಗಳು ಕ್ರೈಸ್ತರು ಗಮನಕ್ಕೆ ಬರುವುದಕ್ಕೆ ಸಾಕಾದವು. ಆತನ ನಾಮವನ್ನು ಹೊಂದಿದವರು ತಾವು ಅದರ ಪ್ರತಿಫಲವನ್ನು ತರಬೇಕು ಎಂಬುದನ್ನು ತಿಳಿದಿದ್ದರು. ಪೇತ್ರ ಬರಹವು ಕ್ರೈಸ್ತರಿಗೆ ಅವರು ಅನುಭವಿಸುತ್ತಿರುವ ಅವಮಾನಕಾರಿ ರೀತಿಯ ನಡೆಯ ಜೊತೆ ವ್ಯವಹರಿಸಲು ಅವಶ್ಯವಾದ

ಆತ್ಮೀಕ ಸಂಪನ್ಮೂಲಗಳನ್ನು ಕೊಡುವದಾಗಿದೆ. ಭವಿಷ್ಯದಲ್ಲಿ ಇದಕ್ಕಿಂತಲೂ ಕಠಿಣವಾದದ್ದನ್ನು ಎದುರಿಸಬೇಕಾದದ್ದಕ್ಕೂ ಸಿದ್ಧರಾಗಿರಬೇಕೆಂದು ಆತನು ಬರೆಯುತ್ತಾನೆ.

ಕ್ರೈಸ್ತರ ಸಂಕಟಗಳ ಜೊತೆಗೆ 1 ಪೇತ್ರದ ಹತ್ತಿರದ ಓದುವಿಕೆಯಲ್ಲಿ ಲೇಖಕನ ಮನಸ್ಸಿನಿಂದ ಎಂದಿಗೂ ದೂರವಾಗದ ಇನ್ನೊಂದು ಅಂಶವು ಪ್ರಕಟವಾಗುತ್ತದೆ. ಈ ಅಂಶವು ಹಿಂಸೆ ಮತ್ತು ಸಂಕಟಕ್ಕೆ ಸಂಬಂಧಿಸಿದ್ದು ಆಗಿದ್ದು, ಹೊಸ ಒಡಂಬಡಿಕೆಯುದ್ದಕ್ಕೂ ಪ್ರತಿಧ್ವನಿಸುವಂತದ್ದು ಆಗಿದೆ. ಕರ್ತನ ನಂಬಿಕೆಯು ಮರಳಬೇಕು ಮತ್ತು ಅವರದೇ ಆದ ಪ್ರತಿಷ್ಟೆಯು ಅವರೆಡೆ ಇರುವದು ಎಂದು ಅಪೊಸ್ತಲನು ತನ್ನ ಓದುಗರಿಗೆ ಪ್ರತಿಪಾದಿಸುವವನಾಗಿದ್ದಾನೆ (1:5, 7, 13; 2:12; 4:7, 13; 5:1, 4, 10). ಅವರು ಸೈರಿಸಿಕೊಳ್ಳುತ್ತಿರುವ ಯಾವುದೇ ತಪ್ಪಾದವುಗಳು ಮುಯ್ಯಿತೀರಿಸಲ್ಪಡುವವು. ನ್ಯಾಯತೀಪಿನಲ್ಲಿ ಕರ್ತನು ಈ ಲೋಕಕ್ಕೆ ಮರಳಿಬರುವನು ಮತ್ತು ನ್ಯಾಯವನ್ನು ತೀರಿಸುವನು. ಪೇತ್ರನು ತನ್ನ ಓದುಗರ ನಿರೀಕ್ಷೆಯನ್ನು ನವೀಕರಿಸಲು ಬರೆಯುವವನಾಗಿದ್ದಾನೆ (1:13). ತಮ್ಮ ನಂಬಿಕೆಯೊಡನೆ ಜೊತೆಯಾದಂಥವುಗಳನ್ನು ಪರಿತಪ್ಪಿಸುವದರೊಡನೆ ವ್ಯವಹರಿಸುತ್ತಿರುವದಕ್ಕೆ ಅವಶ್ಯವಾದ ಬಲದ ಮೂಲವು ಕರ್ತನಲ್ಲಿಯ ವಿಶ್ವಾಸವು ಮರಳುವದು (3:14). ಅಪೊಸ್ತಲನ ಮೊದಲ ಓದುಗರ ಕಷ್ಟಗಳು ಮತ್ತು ಕರ್ತನ ಅನಿರೀಕ್ಷಿತ ಬರೋಣವು 1 ಪೇತ್ರದಲ್ಲಿರುವ ಕ್ರೂಢಿಕರಿಸುವ ಎರಡು ಅಂಶಗಳಾಗಿವೆ. ಕರ್ತನು ಮರಳಿದಾಗ, ನಿರೀಕ್ಷೆಯು ಅರಿವಾಗುವದು ಮತ್ತು ಆನಂದವು ಪರಿಪೂರ್ಣವಾಗುವದು (1:6-9).

ಪೇತ್ರನು ಬರೆದದ್ದರಲ್ಲಿ ಸಂಕ್ಷಿಪ್ತಕರಿಸಿದ್ದಕ್ಕೆ ಈ ಕೆಳಗಿನವುಗಳು ಕಾರಣವಾಗಿರಬಹುದು: ಕ್ರಿಸ್ತನ ಶ್ರಮೆಯನ್ನು ಹಂಚಿಕೊಳ್ಳಲು ಸಮರ್ಥರಾದಾಗ ಅವರು ಆಶೀರ್ವದಿಸಲ್ಪಟ್ಟರುವವರು ಎಂದು ಕ್ರೈಸ್ತರಿಗೆ ಧೈರ್ಯಕೊಡಲು ಆತನು ಬಯಸಿದ್ದನು (4:14, 16). ಸಂಕಟವು ನಿರೀಕ್ಷಿತವೇ ಆಗಿತ್ತು. ಜಗತ್ತು ತಿಳಿಯದ್ದನ್ನು ಅವರು ಬಲ್ಲವರಾಗಿದ್ದರಿಂದ ಅವರು ಸಂರಕ್ಷಿಸಲ್ಪಟ್ಟವರಾಗಿದ್ದರು; ಅಂದರೆ ಯೇಸುವು ಕರ್ತನಾಗಿ, ನ್ಯಾಯಾಧಿಪತಿಯಾಗಿ ತಿರುಗಿ ಬರುವನು ಎಂಬುದೇ (ನೋಡಿರಿ 1:17; 4:17). ಆತನು ಮರಳಿದಾಗ ಅವರು ಆಶೀರ್ವಾದವನ್ನು ವಿಮೋಚನೆಯಲ್ಲಿ ಹಂಚಿಕೊಳ್ಳುವರು. "[ಅವರ] ನಂಬಿಕೆಯೆ ಪ್ರತಿಫಲದಂತೆ" ಅವರು "ತಮ್ಮ ಅತ್ಮ ರಕ್ಷಣೆಯನ್ನು ಹೊಂದಿಕೊಳ್ಳುವರು ಎಂದು ಪೇತ್ರನು ತನ್ನ ಓದುಗರಿಗೆ ಭರವಸೆಯನ್ನು ಕೊಡುವವನಾಗಿದ್ದಾನೆ" (1:9). ಪೌಲನಂತೆ ಪೇತ್ರನಿಗೋಸ್ಕರ "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ, ಈಗಿನ ಕಾಲದ ಕಷ್ಟಗಳು ಅಲ್ಲವೇ ಸರಿ ಎಂದು ನೆನಿಸುತ್ತೇವೆ" (ರೋಮಾಪುರ 8:18).

ಈ ಎರಡನ್ನೂ ಒಳಗೊಂಡ ಅಂಶಗಳ ಬೆಳವಣಿಗೆಯನ್ನು ಮೀರಿ, ಕ್ರಿಸ್ತ ಜೀವಿತಕ್ಕೆ ಕೇಂದ್ರವಾಗಿರುವ ಇತರ ಅಂಶಗಳನ್ನು ಪೇತ್ರನು ಸಂಬೋಧಿಸಿದ್ದಾನೆ. ಕಷ್ಟಗಳು ನಿರಾಶಾವಾದಿಯನ್ನು ಕಲಿಸಬಹುದು ಎಂದು ಆತನು ಚಿಂತಿತನಾಗಿದ್ದಾನು. ಅದಕ್ಕೆ ವ್ಯತಿರಿಕ್ತವಾಗಿ, ನಿರಾಶವಾದಿತ್ವವು ಜಗತ್ತು ತಮ್ಮನ್ನು ಹೇಗೆ ನೋಡಿಕೊಳ್ಳುತ್ತದೋ ಅದೇ ರೀತಿಯಲ್ಲಿ ಜಗತ್ತನ್ನು ನೋಡುವ ನಿಟ್ಟಿನಲ್ಲಿ ಕ್ರೈಸ್ತರನ್ನು ನಡೆಸಬಹುದಿತ್ತು. ಅವರು ಪವಿತ್ರವಾದ ಮತ್ತು ಉತ್ತಮ ಜೀವಿತ ದತ್ತ ಜೀವಿಸುವದಕ್ಕಾಗಿ ಮತ್ತು ಅಪವಿತ್ರವಾದ ನಡತೆಯತ್ತ ಎಂದಿಗೂ ನಡೆದುಕೊಳ್ಳದ ಹಾಗೆ ಅಪೊಸ್ತಲನು ಪದೇಪದೇ ಬೋಧಿಸುವತ್ತ ತಿರುಗುತ್ತಿದ್ದಾನೆ (2:12; 3:8, 9, 17; 4:3, 15). ಕ್ರೈಸ್ತರು ತೆರದ ಮನದ ಪ್ರಾಮಾಣಿಕತೆಯಿಂದ ಸುಳ್ಳನ್ನು ಮತ್ತು ಮೋಸವನ್ನು ಎದುರಿಸಬೇಕು. ಅವರು ದ್ವೇಷದ ಮತ್ತು ಹಂಗಿಸುವದಕ್ಕೆ ಸಭ್ಯತೆಯಿಂದ ಮತ್ತು ಕರುಣೆಯಿಂದ ಉತ್ತರ ಕೊಡಬೇಕು (3:9). ಕಷ್ಟವು ಬಂದದ್ದೇ ಆದರೆ, ಕ್ರೈಸ್ತರು ಅನ್ಯಾಯವಾಗಿ ವರ್ತಿಸಿದ್ದಕ್ಕಾಗಿಯೇ ಹೊರತು ಮತ್ತಾವುದಕ್ಕೂ ಅಲ್ಲ ಎಂದು ಪೇತ್ರನು ಒತ್ತಿ ಹೇಳುತ್ತಾನೆ (3:17; 4:15). ಕರುಣೆ, ಒಪ್ಪಿಸಿಕೊಳ್ಳುವಿಕೆ, ಮತ್ತು ಸೇವೆಮಾಡುವದು ಈ ಗುಣಗಳು ಜಗತ್ತು ದ್ವೇಷಿಸುವಂಥ ಮತ್ತು ತಾಳಿಕೊಳ್ಳದೇ ಇರುವಂಥವು ಆಗಿದ್ದು ಅವರ ಜೀವಿತವನ್ನು ಕೊಲ್ಲುವವುಗಳು ಅಲ್ಲ. ತನ್ನ

ಓದುಗರು ತಾವು ಪರಿಶುದ್ಧ ಜನರು (1:14-16; 2:9), ದೇವರ ಆಲಯದ ಕಲ್ಲುಗಳು (2:5) ಎಂದು ಅವರು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಅಪೊಸ್ತಲನು ಬಯಸಿದ್ದನು. ಪರಿಶುದ್ಧತೆಯು ಅವರು ಜೀವಿಸುವ ಜೀವಿತದ ಯಶಸ್ಸಿನ ಅಳತೆಯು ಆಗಿದ್ದು ಯೇಸು ಜೀವಿಸಿದ ಜೀವಿತವನ್ನು ಅನುಕರಿಸುವವು ಆಗಿದೆ. ಜೀವಿತದ ಎಲ್ಲಾ ವಿಷಯಗಳಲ್ಲಿ, ಯೇಸುವು *hupogrammos* ಮಾದರಿ ಆಗಿದ್ದನು. ಆತನ ತುಟಿಗಳ ಮೇಲೆ ಪಾಪವಿರಲಿಲ್ಲ; ಜನರು ಆತನನ್ನು ನಿಂದಿಸಿದಾಗ, ಆತನು ತಿರುಗಿ ಅವರನ್ನು ನಿಂದಿಸಲಿಲ್ಲ (2:21-23). ಆತನ ವಿಶ್ವಾಸಿಗಳ ತುಟಿಗಳ ಮೇಲೂ ಪಾಪವಿರಬಾರದು; ಜನರು ಆತನನ್ನು ನಿಂದಿಸಿದಾಗ್ಯೂ, ಅವರು ತಿರುಗಿ ನಿಂದಿಸಬಾರದು.

## ಪತ್ರದ ಲೇಖಕ

ಸುವಾರ್ತೆಯಲ್ಲಿ, ಸಿಮೋನ ಪೇತ್ರನು ದೊಡ್ಡದಾಗಿ ಕಾಣುತ್ತಾನೆ. ಯೇಸುವಿನ ಕಥೆಯಲ್ಲಿ ಸ್ಥಾನವನ್ನು ಹೊಂದಿರುವದು ಇತರ ಅಪೊಸ್ತಲರಲ್ಲಿ, ಅಷ್ಟೆ ಏಕೆ "ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನನ್ನು" (ಯೋಹಾನ 21:7) ಕೂಡ ಪೇತ್ರನೊಡನೆ ಹೋಲಿಸುವುದಾಗಿದೆ. "ಪೇತ್ರ" ಎಂಬ ಹೆಸರು ಸುವಾರ್ತೆಯಲ್ಲಿ ಸುಮಾರು ಎಪ್ಪತ್ತು ಸಾರಿ ತನ್ಮೂಲಕ ಕಾಣಿಸಿಕೊಂಡಿದೆ. ಇದಕ್ಕೆ ಜೊತೆಯಾಗಿರುವಲ್ಲಿನ, ಇಪ್ಪತ್ತಾರು ಸ್ಥಳಗಳಲ್ಲಿ "ಸಿಮೋನ" ಮತ್ತು "ಪೇತ್ರ" ಜೊತೆಯಾಗಿ ಕಾಣಿಸಿಕೊಂಡಿವೆ. ಹದಿನೇಳು ಬಾರಿ ಅಪೊಸ್ತಲನು ಕೇವಲ ಸಿಮೋನನೆಂದು ಕರೆಯಲ್ಪಟ್ಟನು, ಮತ್ತು ಸುವಾರ್ತೆಯಲ್ಲಿ ಒಂದು ಬಾರಿ ಕೇಫ ಎಂದು ಕರೆಯಲ್ಪಟ್ಟನು (ಯೋಹಾನ 1:42). ಇದಕ್ಕೆ ತದ್ವಿರುದ್ಧವಾಗಿ, ಅಪೊಸ್ತಲನಾದ ಯೋಹಾನನು ಆತನ ಹೆಸರಿನಿಂದ ಸುಮಾರು ಇಪ್ಪತ್ತು ಬಾರಿ ಮಾತನಾಡಿದ್ದಾನೆ. ಸುವಾರ್ತೆಯಲ್ಲಿ ಯೇಸುವನ್ನು ಬಿಟ್ಟು ಬೇರೆಯಾರಾದರೂ ಕೇಂದ್ರ ಸ್ಥಾನವನ್ನು ಪೇತ್ರನಂತೆ ಹೊಂದಿದ್ದರೆ ಆದರೆ ಅದು ಆತನು ತಾನೆ.

ಆತುರದಲ್ಲಿ ಮಾತನಾಡುವ ಆತನ ಅಯೋಗ್ಯವಾದ ಸಲಹೆಯ ಮಾತುಗಳು, ಚಂಚಲ ನಂಬಿಕೆ, ಆತನ ಸರಳವಾದ ಮಾನವೀಯತೆ, ಪಶ್ಚಾತ್ತಾಪದ ವಿಶ್ವಾಸದ ಬಗೆಗೆ ಸುವಾರ್ತೆ ಯಲ್ಲಿ ದಾಖಲಾದವನ್ನು ಹೇಳುವಲ್ಲಿ ಕ್ರೈಸ್ತರು ಎಂದಿಗೂ ಸುಸ್ತಾಗರು. ಪೇತ್ರನು ನೀರಿನಲ್ಲಿ ನಡೆಯುವ ಮೂಲಕ ಕರ್ತನೊಂದಿಗೆ ತನ್ನ ನಡೆಯನ್ನು ಪ್ರಾರಂಭಿಸಿದನು, ಆದರೆ ಆತನ ನಂಬಿಕೆಯು ಚಂಚಲವಾಗಿತ್ತು (ಮತ್ತಾಯ 14:28-33). ಸ್ವಲ್ಪಹೊತ್ತಿನಲ್ಲೇ ನಿಷ್ಟುರವಾದ ಗದರಿಕೆಯನ್ನು ಆತನು ಪಡೆಯುವವನಾಗಿದ್ದರೂ ಕೂಡಾ (ಮತ್ತಾಯ 16:23). "ಬರಬೇಕಾ ಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" (ಮತ್ತಾಯ 16:16) ಎಂದು ಕೈಸರೆಯ ಫಿಲಿಪ್ಪಿಯಲ್ಲಿ ಪೇತ್ರನು ಧೈರ್ಯಶಾಲಿಯಾಗಿ ಅರಿಕೆಮಾಡುತ್ತಾನೆ. ಕರ್ತನನ್ನು ಪರೀಕ್ಷಿಸುವಾಗ ಪೇತ್ರನು ಅಲ್ಲಿದ್ದನು. ಕರ್ತನ ಸ್ವಂತದವನು ಎನ್ನುವ ಅವಕಾಶವು ಕೊಡಲ್ಪಟ್ಟಾಗ, ತಾನು ಎಂದಿಗೂ ನಜರೇತಿನ ಯೇಸುವನ್ನು ತಿಳಿದಿಲ್ಲ ಎಂದು ನಿರಾ ಕರಿಸಿದನು (ಮತ್ತಾಯ 26:69-75). ಶತಮಾನಗಳ ಹಿಂದೆ ಇದ್ದಂಥ ಪೇತ್ರನ ಕಥೆಗಳು ಇಂದು ವಿಶ್ವಾಸಿಗಳಿಗೆ ಪ್ರೇರಕವಾಗಿವೆ.

ಸುವಾರ್ತೆಯು ಕೊನೆಯಾಗುವಲ್ಲಿ ನಾವು ಪೇತ್ರನ ಜೊತೆಯನ್ನು ಅಂತ್ಯಗೊಳಿಸುವದಿಲ್ಲ. ಅಪೊಸ್ತಲಕೃತ್ಯಗಳು ಮೊದಲನೆಯ ಅಧ್ಯಾಯದಲ್ಲಿ, ಪಂಚಾಶತ್ತಮ ದಿನದ ಮಾರ್ಗದೆಡೆಯಲ್ಲಿ ನಡೆಸಿದ ರೂಪಾಂತರಿತ ಅಪೊಸ್ತಲನನ್ನು ನಾವು ಎದುರಿಸುತ್ತೇವೆ. ಯೆಹೂದಿ ಸಾಮ್ರಾಜ್ಯದ ಬಾಗಿಲನ್ನು ತೆರೆಯುವಂಥ, ಪುಸ್ತಕದಲ್ಲಿ ದಾಖಲಾದ ಮೊದಲ ಸುವಾರ್ತಾ ಪ್ರಸಂಗವನ್ನು ಆತನು ಬೋಧಿಸಿದನು (ಅಪೊಸ್ತಲರ ಕೃತ್ಯಗಳು 2:14-36; ನೋಡಿರಿ ಮತ್ತಾಯ 16:19). ಇದನ್ನು ಮೀರಿ, ಮನೆವಾರ್ತೆಯವನಾದ ಕೊರ್ನೇಲ್ಯನಿಗೆ ಬೋಧಿಸುವ ಮೂಲಕ ಅನ್ಯರಿಗೆ ನಂಬಿಕೆಯನ್ನು ಬೋಧಿಸುವ ಬಾಗಿಲನ್ನು ಆತನು ಮೊದಲು ತೆರೆದನು (ಅಪೊಸ್ತಲರ ಕೃತ್ಯಗಳು 10; 11). ಆದಿಸಭೆಯಲ್ಲಿ ಆತನ ಸ್ಥಾನವು, ಆತನ ಸಾಕ್ಷಿಯ ಪ್ರಾಮಾಣಿಕತೆಯು,

ಮತ್ತು ಯೆಹೂದಿ ಎದುರಾಳಿಗಳೊಂದಿಗಿನ ಆತನ ಧೈರ್ಯದ ಎದುರಿಸುವಿಕೆಯು ನಮಗೆ ಯೇಸುವಿನ ಶಕ್ತಿಯು ಆತನ ಶಿಷ್ಯರ ಜೀವಿತದ ಮೇಲೆ ವಿಸ್ತರಿಸಿದ್ದನ್ನು ನೆನಪಿಸುವುದಾಗಿದೆ. ಅಪೊಸ್ತಲರಕೃತ್ಯದಲ್ಲಿ ಯೇಸುವಿನ ಜ್ಞಾನವು ಗ್ರೀಕ್ ಮತ್ತು ಅರಮಾಯ ಭಾಷೆಯಲ್ಲಿ "ಬಂಡೆ" ಎಂದು ನಿರ್ಧಿಷ್ಟವಾದ ಅರ್ಥವನ್ನು ಹೊಂದಿರುವ "ಪೇತ್ರ" ಅಥವಾ "ಕೇಫ" (ಯೋಹಾನ 1:42) ಎಂಬ ಹೆಸರಿನ ವ್ಯಕ್ತಿಯ ಹೆಸರಿನಲ್ಲಿ ಕೊಡಲ್ಪಟ್ಟಿರುವದನ್ನು ನಾವು ಕಾಣುತ್ತೇವೆ. ಸುಮಾರು ಮೂರುವರ್ಷಗಳ ಹಾದಿಯಲ್ಲಿ ಯೇಸು ಒಬ್ಬ ಚಂಚಲನಾದ ಮೀನುಗಾರನನ್ನು ಬಲದ ಗೋಪುರವನ್ನಾಗಿಸಿದನು. ಇದು ಕೇವಲ ಯೇಸುವಿನ ಕಥೆಯಲ್ಲಿ ಇಲ್ಲ ಆದರೆ ಅಪೊಸ್ತಲರ ಕೃತ್ಯದಲ್ಲಿ ದಾಖಲಾದಂಥ ಆದಿ ಸಭೆಯ ಕಥೆಗಳಲ್ಲಿ ಸಹ ಇರುವುದಾಗಿದ್ದು, ಸಿಮೋನ ಪೇತ್ರನೆಂಬ ವ್ಯಕ್ತಿಯು ವೃತ್ತಾಂತಗಳಲ್ಲಿ ಪ್ರಮುಖವಾಗಿ ಇರುವವನಾಗಿದ್ದಾನೆ.

ಸುವಾರ್ತೆಗಳಲ್ಲಿ ಮತ್ತು ಅಪೊಸ್ತಲರ ಕೃತ್ಯದಲ್ಲಿ ಪೇತ್ರನ ಪ್ರಾಮುಖ್ಯತೆಯನ್ನು ಪರಿಗಣಿಸುತ್ತಾ, ಆ ಅಪೊಸ್ತಲನು ಎರಡು ಪತ್ರಗಳು ಹೆಚ್ಚುಕಡಿಮೆ ಹೊಸ ಒಡಂಬಡಿಕೆಯಲ್ಲಿ[2] ಮರೆಯಲ್ಪಟ್ಟಂಥದ್ದು, ಕೆಲಸಾರಿ ಪರಿಣಾಮಕಾರಿಯಲ್ಲದಿರುವದು ಅಚ್ಚರಿದಾಯಕವಾದದ್ದು ಆಗಿದೆ. ಹತ್ತಿಕ್ಕುವಿಕೆಗಳು ಇಬ್ರಿಯ ಪತ್ರಿಕೆ ಮತ್ತು ಪ್ರಕಟನೆ ಗ್ರಂಥಗಳ ಮಧ್ಯ ಇದ್ದು, ಕ್ಯಾಥೋಲಿಕ್ ಪತ್ರಗಳು ಆದಂಥ (ಯಾವಾಗಲೂ ಅವುಗಳನ್ನು ನಾವು ಕರೆಯುವಂಥ ಸಾಮಾನ್ಯ ಪತ್ರಗಳು) ಯಾಕೋಬ, ಪೇತ್ರ, ಯೋಹಾನ, ಮತ್ತು ಯೂದ ಕಳೆದುಹೋಗುವತ್ತ ವಾಲುವವುಗಳಾಗಿವೆ. ಬಹುಶಃ ಇದು ಪೌಲನ ಪತ್ರದ ಶಕ್ತಿಯಾಗಿರಬಹುದು ಮತ್ತು ಪೇತ್ರನ ಪತ್ರಗಳನ್ನು ಅಲಕ್ಷಿಸುವದಕ್ಕೆ ಸಂಬಂಧಿಸಿದವುಗಳಲ್ಲಿನ ಪರಿಣಾಮವಾಗಿರುವ ಕ್ರೈಸ್ತೀಯ ತಾತ್ವಿಕವನ್ನು ವರ್ಣಿಸುವವುಗಳನ್ನು ಸೆದೆಬಡಿಯುವಲ್ಲಿ ಪಾತ್ರವನ್ನು ಅವು ನಿರ್ವಹಿಸುವವು ಆಗಿವೆ. ಅಲಕ್ಷಿಸುವದಕ್ಕೆ ಯಾವುದೇ ಕಾರಣಗಳು ಇರಲಿ, 1 ಪೇತ್ರ ಪತ್ರಿಕೆಯು ನಮ್ಮ ಕ್ರೈಸ್ತೀಯ ಸಂಸ್ಕೃತಿಯ ಪ್ರಮುಖ ಭಾಗವಾಗಿದೆ. ಪತ್ರದ ಒಂದು ಪ್ರಾರ್ಥನಾಪೂರಿತ ಅಧ್ಯಯನವು ಕ್ರಿಸ್ತೀಯ ನಂಬಿಕೆಯನ್ನು ಸಮೃದ್ಧಿಗೊಳಿಸುವಲ್ಲಿ ಎಂದಿಗೂ ವಿಫಲವಾಗದು. ಪತ್ರದ ಸಂದೇಶವು ಅದನ್ನು ಉತ್ಪಾದಿಸಿದ ಮೊದಲನೆಯ ಶತಮಾನದ ಜಗತ್ತನ್ನು ಮೀರಿ ಹೋಗುವಂತದ್ದಾಗಿದೆ.

ಪತ್ರದ ಆರಂಭದ ಅಕ್ಷರವು ನಾವು ಆಶಿಸಬಹುದಾದಂತೆ ಲೇಖಕನನ್ನು ಗುರುತಿಸುವದಾಗಿದೆ. ಪತ್ರವು "ಯೇಸು ಕ್ರಿಸ್ತನ ಅಪೊಸ್ತಲನಾದ ಪೇತ್ರ" ಎಂಬುದರಿಂದ ಇದೆ. ಈ ಸಾಕ್ಷಿಯ ಮತ್ತು ಎರಡನೆಯ ಶತಮಾನದ ಸಭೆಯ ಸಾಮಾನ್ಯ ಸಾಕ್ಷಿಯ ಆಧಾರದ ಮೇಲೆ, ಸುವಾರ್ತೆಗಳನ್ನು ಮತ್ತು ಅಪೋಸ್ತಲರ ಕೃತ್ಯಗಳಲ್ಲಿ ಎದುರಾದಂಥ ಅದೇ ಪೇತ್ರನು ತನ್ನ ಹೆಸರನ್ನು ಸಹಿಸುವವನು ಈ ಪತ್ರದ ಲೇಖಕನು ಎಂದು ಕೆಲವರು ಸಂಶಯ ವ್ಯಕ್ತಪಡಿಸುವವರಾಗಿದ್ದಾರೆ.[3] ನಾವು ನಿರೀಕ್ಷಿಸುವಂತೆ, ಅಲ್ಲಿ ಸಂಶಯಗಳು ಇದ್ದರೆ, ದೃಢವಾದ ಮಾತನ್ನು ಬೆಂಬಲಿಸುವಂತಹ ಪುರಾವೆಗಳು ಸಿಮೋನ ಪೇತ್ರನು ಲೇಖಕನು ಎಂದು ಇದು ಆಧರಿಸುವಂತದ್ದಾಗಿದೆ.

ಪೇತ್ರನ ಪತ್ರದ ಲೇಖಕತ್ವವನ್ನು ಸಂಶಯಿಸುವವರು ಗಲಿಲಾಯದ ಮೀಂಗುಲಿಗನಿಂದ ನಾವು ಆಶಿಸಬಹುದಾದಕ್ಕಿಂತಲೂ ಉತ್ತಮ ಗುಣಮಟ್ಟದ ಅತ್ಯುತ್ತಮ ಸಾಹಿತ್ಯವನ್ನು ಪತ್ರವು ಹೊಂದಿರುವ ಬಗ್ಗೆ ವಾದಮಾಡಲ್ಪಡುವವರಾಗಿದ್ದಾರೆ. ಮಧ್ಯಯುಗದ 60ರ ಕ್ಕಿಂತ ನಂತರದಲ್ಲಿ ರೋಮದಲ್ಲಿ ಪೇತ್ರನು ಮರಣಿಸಿದಾಗ ಸಭಯಲ್ಲಿ ಅಭಿವೃದ್ಧಿಯ ಸ್ಥಿತಿಯನ್ನು ಪತ್ರವು ಪ್ರತಿಬಿಂಬಿಸುವುದಾಗಿದೆ ಎಂದು ಅವರು ನಂತರದಲ್ಲಿ ಕಾದುಕೊಳ್ಳುವವರಾಗಿದ್ದಾರೆ.[4] ಇದಕ್ಕೆ ಜೊತೆಯಾಗಿ, ಪೇತ್ರನು ಲೇಖಕನಾಗಿದ್ದಾದರೆ ಆತನು ಕರ್ತನೊಡನೆಯ ತನ್ನ ವೈಯಕ್ತಿಕ ಸಂಬಂಧವನ್ನು ಪ್ರಸ್ತಾಪಿಸುವದರ ಜೊತೆ ತನ್ನ ವಾದವನ್ನು ಹಾಕಿ ಗುರುತಿಸುತ್ತಿದ್ದನು ಎಂದು ಕೆಲವರು ವಾದಿಸುವವರಾಗಿದ್ದಾರೆ.

ಗ್ರೀಕ್‌ನ 1 ಪೇತ್ರ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿ ಉತ್ತಮವಾದದ್ದು ಎಂಬುದು

ನಿಜವಾಗಿದೆ. ಹೇಗೋ, ಪೇತ್ರನು ಸಮ್ಮತಿಸಿದಂತಹ ಆತನ ಲಿಪಿಕಾರ ಅಥವಾ ಉಕ್ತಲೇಖಕನಾದಂಥ ಸಿಲ್ವಾನಸ್/ಸೀಲನನ್ನು ವಾಸ್ತವವಾಗಿ ನಾವು ಎಂದಿಗೂ ನಿರ್ಲಕ್ಷಿಸಬಾರದು (5:12). ಸೀಲನು ಅಪೊಸ್ತಲರ ಕೃತ್ಯಗಳು 15:22ರಲ್ಲಿ ಮೊದಲು ಗುರುತಿಸಲ್ಪಟ್ಟಿದ್ದಾನೆ. ಆತನು ಯೆಹೂದಿ ಕ್ರೈಸ್ತನಾಗಿದ್ದಾಗ, ಆತನ ಹೆಸರು ಸಂಪೂರ್ಣವಾಗಿ ಗ್ರೀಕೋ ರೋಮನ್ ಆಗಿತ್ತು. ಯೆರೂಸಲೇಮಿನ ಸಭೆಯಿಂದ ಅನ್ಯವಿಶ್ವಾಸಿಗಳಿಗೆ ಸೂಕ್ಷ್ಮವಾದ ಪತ್ರವನ್ನು ತಲುಪಿಸುವಲ್ಲಿ ಸೀಲನ ಪಾತ್ರವು (ಅಪೊಸ್ತಲರ ಕೃತ್ಯಗಳು 15), ಮತ್ತು ಥೆಸಲೋನಿಕದವರಿಗೆ ಬರೆದ ಎರಡು ಪತ್ರಗಳನ್ನು ಬರೆಯುವಲ್ಲಿ ಪೌಲನ ಜೊತೆ ಸೇರುವುದರ ವಾಸ್ತವವು (1 ಥೆಸಲೋನಿಕ 1:1; 2 ಥೆಸಲೋನಿಕ 1:1) ಆತನು ವಿದ್ಯಾವಂತನೂ ಸ್ಪುಟವಾದ ಕ್ರೈಸ್ತನೂ ಎಂದು ಸೂಚಿಸುವುದಾಗಿದೆ. ಇದು ಹಾಗಿರುವಾಗ 1 ಪೇತ್ರ ಬರೆಯುವಲ್ಲಿನ ಆತನ ಪಾತ್ರವು ಪತ್ರದ ಅತ್ಯುತ್ತಮ ರೀತಿಯ ಶೈಲಿಗೆ ಕಾರಣವಾಗಿದೆ.[5] ಸೀಲನು ಪೇತ್ರನ ಲಿಪಿಕಾರನಾಗಿ ಕೆಲಸಮಾಡಿದ್ದಾದರೆ, ಉತ್ತಮವಾದ ಗ್ರೀಕ್ ಗದ್ಯದಲ್ಲಿರುವ ವಾಕ್ಯಗಳನ್ನಾಗಿ ಪುನರಾವರ್ತಿಸಿದ್ದಾದರೆ, ಹಾಗಿದ್ದಾಗ್ಯೂ ಈ ಪತ್ರವು ಪೇತ್ರನದಾಗುತ್ತಿತ್ತು. ಸೀಲನು ಪ್ರವಾದಿಯಾಗಿದ್ದರಿಂದ (ಅಪೊಸ್ತಲರ ಕೃತ್ಯಗಳು 15:32), 1 ಪೇತ್ರ ಪತ್ರಿಕೆಯನ್ನು ವೈಯಕ್ತಿಕವಾಗಿ ಪ್ರತಿಯೊಂದು ಪದವನ್ನು ನಕಲು ಮಾಡುವದಕ್ಕಾಗಿ ಪೇತ್ರನಿಗೆ ಒಬ್ಬನ ಅವಶ್ಯಕತೆಯು ಕ್ವಚಿತ್ತಾವಾಗಿತ್ತು ಎಂದು ಖಂಡಿತವಾಗಿ ಹೇಳಬಹುದು.

ಪೇತ್ರಾಯನ ಲೇಖಕತ್ವಕ್ಕೆ ಇರುವ ಇತರ ಅಭ್ಯಾಂತರದ ಸಂಬಂಧಿಸಿದಂತೆ, ಏಷಿಯಾಮೈನರದಲ್ಲಿನ ಆದಿ ಸಭೆಯ ಬೆಳವಣಿಗೆಯ ಬಗ್ಗೆ ನಾವು ಕ್ವಚಿತ್ತಾಗಿ ತಿಳಿದಿದ್ದು, 1 ಪೇತ್ರ ಪತ್ರಿಕೆಯು 60ರ ಮಧ್ಯದ ಒಂದು ಕಾಲಾವಧಿಯ ನಂತರದ ಅವಧಿಯ ಮೇಲೆ ಪ್ರತಿಬಿಂಬಿಸುತ್ತದೆ ಎಂಬುದನ್ನು ಸಮರ್ಥಿಸಿಕೊಳ್ಳಲು ಸಾಕಷ್ಟು ಪುರಾವೆಗಳು ಇಲ್ಲ. ಕರ್ತನೊಂದಿಗಿನ ತನ್ನ ವೈಯಕ್ತಿಕ ಸಂಬಂಧದ ಬಗ್ಗೆ ಅಪೊಸ್ತಲನು ಯಾವುದೇ ಸೂಚ್ಯವಾದ ಉಲ್ಲೇಖವನ್ನು ಯಾಕೆ ಮಾಡಲಿಲ್ಲ ಎಂಬುದಕ್ಕೆ ನಾವು ಏನನ್ನು ಹೇಳಲಾರೆವು. ಹೇಗೋ, ಅದನ್ನು ಆತನು ತಾನೇ "ಕ್ರಿಸ್ತನಿಗಾಗಿ ಬಾಧೆಪಡುವ ಸಾಕ್ಷಿ" ಎಂದು ಕರೆದುಕೊಂಡಿದ್ದನ್ನು ನಾವು ಗಮನಿಸುವವರಾಗಿದ್ದೇನೆ (5:1; ನೋಡಿರಿ 2:22, 23). ಅಷ್ಟು ಸಾಕು. ನಮ್ಮ ಕೈಯಲ್ಲಿರುವ ಪುರಾವೆಗಳ ಜೊತೆ, ಆ ಪತ್ರವು ಅಪೊಸ್ತಲನಾದ ಪೇತ್ರನಿಂದ ಬರೆಯಲ್ಪಟ್ಟಿದೇ ಎಂದು ಸಂಶಯಪಡಲು ಯಾವುದೇ ಕಾರಣಗಳು ಇಲ್ಲ.[6]

## ಕೇಳುಗರು ಇರುವೆಡೆಯಲ್ಲಿ

ಗಲಾತ್ಯದವರಿಗೆ ಮತ್ತು 1 ಕೊರಿಂಥದವರಿಗೆ ಪತ್ರಿಕೆಯಲ್ಲಿ ಪೇತ್ರನಿಗಾಗಿನ ಪೌಲನ ಸಂಕ್ಷಿಪ್ತ ಪ್ರಸ್ತಾವನೆಯನ್ನು ಬಯಸುತ್ತಾ, ಪೇತ್ರನಿಗಾಗಿನ ಕೊನೆಯ ಆಧಾರವು ಹೊಸ ಒಡಂಬಡಿಕೆಯಲ್ಲಿನ ಅಪೊಸ್ತಲರ ಕೃತ್ಯಗಳು 15ರಲ್ಲಿ ಇದೆ.[7] ಸುಮಾರು ಕ್ರಿ.ಶ. 50ರಲ್ಲಿನ ಯೆರೂಸಲೇಮಿನ ಸಮ್ಮೇಳನ ಎಂದು ಕರೆಸಿಕೊಳ್ಳುವುದರ ಬಗ್ಗೆ ಅಪೊಸ್ತಲನು ಮಾತಾಡಿದ್ದಾನೆ. ಅಪೊಸ್ತಲರ ಕೃತ್ಯದಲ್ಲಿ ಆತನ ಬಗ್ಗೆ ಹೆಚ್ಚಿನದೇನನ್ನೂ ನಾವು ಕೇಳುವದಿಲ್ಲ. ಸರಿಸುಮಾರು ಆತನ ಮರಣದ ಸಮಯದ ಕ್ರಿ.ಶ. 50 ಮತ್ತು 67ರ ಮಧ್ಯದ ಹದಿನೇಳು ವರ್ಷದ ಆರಂಭದಲ್ಲಿ ಅಪೊಸ್ತಲನು ಏನು ಮಾಡುತ್ತಿದ್ದನು? ಅಲ್ಲಿ ಪೇತ್ರನಿಗೆ ಹಿಂಸೆಯ ಆಧಾರವು ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರದಲ್ಲಿ ಇರುವದಾಗಿದೆ. ಕೊರಿಂಥದಲ್ಲಿನ ಗುಂಪುಗಳಲ್ಲಿ ಒಂದು ಗುಂಪು "ಕೇಫ" ಎಂದು ಪ್ರತಿಪಾದಿಸುವುದಾಗಿತ್ತು (1 ಕೊರಿಂಥ 1:12). ಪೇತ್ರನು ಕೊರಿಂಥದಲ್ಲಿ ಇದ್ದಾನೇ? ಆತನು ಅಲ್ಲಿ ಇದ್ದನು ಎಂದು ಪೌಲನು ಸುಮ್ಮನೇ ಹೇಳಿಬಿಡುವದಿಲ್ಲ. ಕೇಫನ ಗುಂಪು ಕೊರಿಂಥಕ್ಕೆ ಯೆರೂಸಲೇಮಿನಿಂದಲೂ ಅಥವಾ ಎಲ್ಲಿಂದಲೇ ಬಂದಿರಬಹುದು. ಅಲ್ಲಿ "ಕ್ರಿಸ್ತನನ್ನು" ಪ್ರತಿಪಾದಿಸಿರುವ ಗುಂಪು ಸಹ ಕೊರಿಂಥದಲ್ಲಿತ್ತು ಎಂದು ನಾವು ಗಮನಿಸಬೇಕು. ಕ್ರಿಸ್ತನು ಸ್ಪಷ್ಟವಾಗಿ ಆ ಪಟ್ಟಣದಲ್ಲಿ

ಇರಲೇಇಲ್ಲ, ಕೊನೇಪಕ್ಷ ದೇಹದಾರಿಯಾಗಿಯೂ ಇರಲಿಲ್ಲ. ಪೇತ್ರನು ಕೊರಿಂಥದಲ್ಲಿ ವೈಯಕ್ತಿಕವಾಗಿ ಇದ್ದನೋ ಇಲ್ಲವೋ ಅದು ಅನಿಷ್ಚಿತವಾಗಿತ್ತು, ಆದರೆ ಪೇತ್ರನು ಪಾಲೀಸ್ತಿನಿನ ಮಿತಿಯ ಹೊರಗೆ ಕಾರ್ಯೋನ್ಮುಖವಾಗಿ ಕೆಲಸಮಾಡಿದ್ದನು ಎಂದು ಪೌಲನ ಉಲ್ಲೇಖವು ಸೂಚಿಸುವುದಾಗಿದೆ. ಪೇತ್ರನು ಪೌಲನಂತೆ ಪ್ರಯಾಣ ಸೇವಕನಾಗಿದ್ದನು ಎಂಬ ಪುರಾವೆ ಗಳನ್ನು ಮುಂದೆ ಮೊದಲನೆಯ ಕೊರಿಂಥ 9:5 ಒದಗಿಸುವುದಾಗಿದೆ.

ಏಷಿಯಾ ಮೈನರ್‌ದಲ್ಲಿ ಪೇತ್ರನು ಸಮಯವನ್ನು ಕಳೆದಿರಬಹುದು ಎಂದು ನಾವು ಧೈರ್ಯವಾಗಿ ಹೇಳಬಹುದು. ಹೆಚ್ಚಾಗಿ ಆಧುನಿಕ ಟರ್ಕಿ ರಾಷ್ಟ್ರದ ಜೊತೆ ಸಂಘಟಿತವಾದಂಥ ರೋಮದ ನಾಲ್ಕು ದೊಡ್ಡ ಪ್ರಾಂತ್ಯಗಳನ್ನು ಆತನು ತನ್ನ ಪತ್ರದಲ್ಲಿ ಸಂಬೋಧಿಸಿದ್ದಾನೆ. ಪೊಂತಿಯ ಮತ್ತು ಬೇಥಾನ್ಯ ಇವುಗಳು 1 ಪೇತ್ರ 1:1ರಲ್ಲಿ ಬೇರೆಯಾಗಿಯೇ ಪಟ್ಟಿಯಾಗಿರು ವಾಗ, ಎರಡು ಪ್ರಾಂತ್ಯಗಳು ಕ್ರಿ.ಪೂ. ಮೊದಲನೆಯ ಮಧ್ಯ ಶತಮಾನದಲ್ಲಿ ಪಾಂಪೆಯು ರಾಷ್ಟವನ್ನು ಆಯೋಜಿಸಿದಾಗ ರೋಮನ್ ಪ್ರಾಂತ್ಯದಲ್ಲಿ ಒಂದಾಗಿ ಸೇರಿಕೊಂಡಿರಬಹುದು. ಈ ಪ್ರಾಂತ್ಯದೊಳಗೆ ಹರಡಿದ ಸಭೆಗಳಿಗಾಗಿ ಪೇತ್ರನು ಪತ್ರವನ್ನು ಬರೆದಿರಬಹುದು ಎಂಬುದು ಯೋಗ್ಯವಾದದ್ದಾಗಿದೆ ಯಾಕೆಂದರೆ ಆತನು ಅವರೊಡನೆ ನೇರವಾದ ಸಂಬಂಧವನ್ನು ಹೊಂದಿದ್ದನು. ಬಹುಶಃ ಪೇತ್ರನ ಮಿಶನರಿ ಸೇವೆಯು ಸಾಗುತ್ತಿರುವ ಸಮಯದಲ್ಲಿಯೇ ಪೌಲನದು ನಡೆದಿತ್ತು. ಪೇತ್ರ ಮತ್ತು ಆತನ ಸಹಯೋಗಿಗಳು ಏಶಿಯಾ ಮೈನರ್ ಕ್ಷೇತ್ರದ ಎಲ್ಲೆಡೆಯಲ್ಲಿಯೂ ಸಭೆಗಳನ್ನು ಸ್ಥಾಪಿಸಿದ್ದಾದರೆ, "ಪೊಂತ ಗಲಿಲಾಯ, ಕಪ್ಪದೋಕ್ಯ ಆಸ್ಯ ಬಿಥೋನ್ಯ ಎಂಬ ಸೀಮೆಗಳಲ್ಲಿ ಚದುರಿರುವಂಥ ..." ಎಂದು ಸಂಬೋಧಿಸಲ್ಪಟ್ಟವರಿಗೆ ಈ ಪತ್ರವು ಸಲ್ಲುವುದಾಗಿದೆ (1:1).

ಪಟ್ಟಿಮಾಡಿದಂಥ ಪ್ರಾಂತ್ಯಗಳ ನಿಟ್ಟಿನಲ್ಲಿ ಅವುಗಳು ಸೂಚ್ಯವಾದದ್ದಾಗಿವೆ. ಸಿಲ್ವಿನಸ್/ಸೀಲನು (5:12) ಅಥವಾ ಇತರ ಕ್ರೈಸ್ತ ಸಂದೇಶಕರು ಕೇಂದ್ರಿಯ ಪೊಂತಿಯದ ಉತ್ತರದಲ್ಲಿನ ಕಪ್ಪು ಸಮುದ್ರದ ದಂಡೆಯ ಮೇಲಿರುವಂಥ ಗ್ರೀಕ್ ಪಟ್ಟಣದ ಸಿನೋಫೆಗೆ ಹಡಗನ್ನು ತೆಗೆದುಕೊಂಡು ಹೋಗಿರಬಹುದು. ಆತನು ದಕ್ಷಿಣಕ್ಕೆ ಪ್ರಯಾಣಿಸಿ ಗಲಾತ್ಯ ಪ್ರಾಂತ್ಯದ ಉದ್ದಕ್ಕೂ, ಆಗ್ನೇಯದಲ್ಲಿ ಕಪ್ಪದೋಕ್ಯದೊಳಗಿನಿಂದ ಪ್ರಯಾಣಿಸಿ, ಏಶಿಯಾದೊಳಕ್ಕೆ ಎರಡು ಸಾರಿ ಹಿಂತಿರುಗಿ, ಮತ್ತು ನಂತರ ಆ ಪ್ರಾಂತ್ಯದ ಒಂದು ರೇವು ಪಟ್ಟಣವಾದ ಉತ್ತರದೆಡೆಗಿನ ಬಿಥೋನ್ಯದಲ್ಲಿ ಆತನು ತಿರುಗಿ ಹಡಗನ್ನು ತಂದನು. ಸಂದೇಶ ಕನು ಎಲ್ಲೇ ಹೋದರು, ಪೇತ್ರನ ಮಾತುಗಳನ್ನು ಓದುವಂಥ ವಿಶ್ವಾಸಿಗಳನ್ನು ಆತನು ಕಂಡುಕೊಳ್ಳಬಹುದಿತ್ತು. ಆದಿ ಸಮಯದಲ್ಲಿ ಏಶಿಯಾ ಮೈನರ್ ಉದ್ದಕ್ಕೂ ಹರಡಿದ್ದ ಕ್ರೈಸ್ತರ ಗುಂಪುಗಳು ಸಹಜವಾಗಿ ಇದ್ದವು ಎಂಬುದು ಗುರುತಿಸುವಂಥದ್ದಾಗಿದೆ.

ಪೇತ್ರನಿಂದ ಸಂಬೋಧಿಸಲ್ಪಟ್ಟ ಪ್ರಾಂತಗಳು ದೊಡ್ಡದಾದ ಭೌಗೋಳಿಕ ಕ್ಷೇತ್ರವನ್ನು ಹೊಂದಿವೆ. ಅವರ ಜನಾಂಗಗಳು ಸಂಕೀರ್ಣವಾದ ಸಾಮಾಜಿಕ, ಜನಾಂಗೀಯ, ಮತ್ತು ಭಾಷಾ ಗುಂಪುಗಳಿಂದ ಬಂದದ್ದಾಗಿವೆ. ರೋಮನ್ ಅಧಿಕಾರದ ಹುಟ್ಟುವಿಕೆಗೆ ಎದುರಾಗಿ, ಪಾಶ್ಚಾತ್ಯ ಪ್ರಾಂತ್ಯಗಳಾದ ಆಸ್ಯ ಮತ್ತು ಬಿಥೋನ್ಯಗಳು, ಕ್ರೈಸ್ತತ್ವದ ಉದಯಕ್ಕಿಂತ ಮುನ್ನ ಅನೇಕ ವರ್ಷಗಳ ಮೊದಲು ರೋಮನ್ನರಿಗೆ ಅವರ ಕೊನೆಯ ಅರಸರ ಮೂಲಕ ಆಸ್ತಿಯಾಗಿ ಕೊಡಲ್ಪಟ್ಟಿದ್ದವು. ಪೊಂತ ಗಲಿಲಾಯ, ಕಪ್ಪದೋಕ್ಯಗಳು ವಿಜಯಗಳ ಫಲಗಳ ಮೂಲಕ ಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟಿದ್ದವು.

ಕ್ರಿ.ಪೂ. 133ರಲ್ಲಿ ಏಶಿಯಾವನ್ನು ರೋಮಕ್ಕೆ ಸೇರಿಸಿಕೊಂಡ ಮೊದಲ ದಶಕಗಳ ನಂತರದಲ್ಲಿ, ಈ ಪ್ರಾಂತಗಳು ಹಿಂಸಕರಾದ ರೋಮನ್ ಸುಂಕದ ಅಧಿಕಾರಿಗಳ ಕೈಯಲ್ಲಿ ದಾರಣವಾಗಿ ಕಷ್ಟಕ್ಕೀಡಾದವು. ರೋಮನ್ನರ ಅಧಿಕಾರವನ್ನು ವಿರೋಧಿಸುವಂಥ ಅವಕಾಶವು ಬಂದಾಗ, ಪ್ರಾಂತದ ಜನರು ಅದರ ಅವಕಾಶವನ್ನು ತೆಗೆದುಕೊಂಡರು. ಕ್ರಿ.ಪೂ. 88ರಲ್ಲಿನ ಕೆಲ ಎರಡು ದಶಕಗಳಿಗಾಗಿ, ಪೊಂತದ ಅರಸನಾದ 6ನೇ ಮೈತ್ರಿದೇತನು ಯುದ್ಧದಲ್ಲಿ

ಪ್ರಾಂತ್ಯವನ್ನು ಗೊಂದಕ್ಕೀಡುಮಾಡಿದನು. ಏಷಿಯಾದ ಹೆಚ್ಚಿನ ಪಟ್ಟಣಗಳು ರೋಮದ ವಿರುದ್ಧ ತಮ್ಮ ಗುಂಪನ್ನು ಪೊಂತಿಯದ ಅರಸನೊಡನೆ ಹಂಚಿಕೊಂಡರು. ಕ್ರಿ.ಪೂ 60ರಲ್ಲಿ, ರೋಮಾ ಸೆನೆಟ್ ನಿಯುಕ್ತವು ಮೋಸಯುತವಾಗಿ ಪಾಂಪೆಗೆ ಮೈತ್ರಿದೇತನ ಜೊತೆ ವ್ಯವಹರಿಸಿತು. ಪೇತ್ರನು ತನ್ನ ಪತ್ರ ಬರೆಯುವಾಗ ರೋಮನ್ ಜನರಲ್‌ನು ಪೊಂತಿಯ ಅರಸನನ್ನು ಹೊರಕ್ಕೆ ತಳ್ಳಿದ್ದನು, ಏಷಿಯಾದ ದಕ್ಷಿಣದ ತೀರದ ಜೊತೆಯಿರುವ ಕಡಲ್ಗಳ್ಳರನ್ನು ಸುತ್ತುಗಟ್ಟಿರುವ ರಾಜ್ಯಗಳನ್ನು ಅಡಗಿಸಿದ್ದನು, ಮತ್ತು ಅದೇ ಪ್ರಾಂತೀಯ ಸಾಲಿನ ಜೊತೆ ಸ್ಥೂಲವಾಗಿ ಉಪಪ್ರಾಂತ್ಯಗಳನ್ನು ಸಂಸ್ಥಾಪಿಸಿದನು. ರೋಮನ ಮೈತಿದೇತನಿಗೆ ವಿಜಯವಾಗುವಲ್ಲಿ ಬೆಂಬಲಿಸಿದ ಪಟ್ಟಣಗಳ ಅದು ಜೊತೆ ಕಠಿಣವಾಗಿ ವ್ಯವಹರಿಸಿತು. ಕ್ರಿ.ಪೂ. 75ರಲ್ಲಿ ಬೇಥಾನ್ಯದ ಕೊನೆಯ ಅರಸನು ತನ್ನ ರಾಜ್ಯವನ್ನು ಸಿನೆಟಗೆ ಮತ್ತು ರೋಮದ ಜನರಿಗೆ ಸ್ವಂತ ಆಸ್ತಿಯಾಗಿ ಕೊಟ್ಟನು.

ಮೈತ್ರಿದೇತನ ನಂತರ ಏಷಿಯಾ ಮೈನರದ ಪಟ್ಟಣಗಳಲ್ಲಿ ಶಾಂತಿಯು ನೆಲಸಿತು, ಆದರೆ ಅವರು ಯಾವುದೇ ವಿರಾಮವನ್ನು ಕಂಡುಕೊಳ್ಳಲಿಲ್ಲ. ರೋಮದ ಅಂತರಿಕ ಯುದ್ಧವು ಕ್ರಿ.ಪೂ. 44ರಲ್ಲಿ ಕೈಸರನ ಕೊಲೆಯ ನಂತರದ ಮುಂಗಡದಲ್ಲಿ ಆರಂಭವಾಯಿತು. ರೋಮದ ಸೇನಾಪತಿ ಮತ್ತು ರಾಜಕೀಯ ವ್ಯಕ್ತಿಗಳು ತಮ್ಮ ಸೈನಿಕರಿಗಾಗಿ ಹಣ ಒದಗಿಸಲು ಕರುಣಾರಹಿತವಾಗಿ ಏಶಿಯಾ ಪಟ್ಟಣಗಳಿಗೆ ಸುಂಕವಿಧಿಸಿದ್ದವು. ಯುದ್ಧವು ಮುಗಿದನಂತರ, ಅಗಸ್ಟಸ್‌ನು ಕ್ರಿ.ಪೂ. 27ರಲ್ಲಿ ಚಕ್ರವರ್ತಿಯಾಗಿ ಹೊರಹೊಮ್ಮಿದನು. ಈತನು ಯುದ್ಧದೇವತೆಯಾದ ಜಾನೂಸನ ರೋಮದ ದೇವಾಲಯದ ಬಾಗಿಲನ್ನು ಮುಚ್ಚಿದವನೂ ಮತ್ತು Pax Romana (ರೋಮದ ಶಾಂತಿಯನು) ಅವಮಾನಿಸಿದವನೂ ಆಗಿದ್ದನು. ಅಗಸ್ಟಸ್‌ನು ಬಲು ಗಂಭೀರವಾದ ತೆರಿಗೆಯನ್ನು ನಿಲ್ಲಿಸಿದನು ಮತ್ತು ಏಶಿಯಾದ ಪಟ್ಟಣಗಳು ಮತ್ತು ಬೇಥಾನ್ಯ ಪಟ್ಟಣಗಳ ಸ್ಥಿರ ಸರ್ಕಾರಗಳಾಗಿ ಸಂಸ್ಥಾಪಿಸುವಂತೆ ಸಹಾಯಿಸಿದನು. ಏಶಿಯಾದ ಸಂತ್ರಪ್ತರಾದ ಮೂಲ ನಿವಾಸಿಗಳ ಕೂಗು ಆತನನ್ನು ದೇವರನ್ನಾಗಿ ಮಾಡಿತು. 1 ಪೇತ್ರ ಬರವಣಿಗೆ ಅಗಸ್ಟಸ್‌ನ ಸವಾರ್ಧಿಕಾರದ ಒಂದು ನೂರು ವರ್ಷಗಳ ಮಧ್ಯಂತರದಲ್ಲಿ, ಏಶಿಯಾವು ತನ್ನದೇ ಆದ ಸಮೃದ್ಧತೆಯಲ್ಲಿ ಆಳುತ್ತಿತ್ತು. ಇದು ಒಂದು ಸಾಮ್ರಾಜ್ಯ ರತ್ನವಾಗಿತ್ತು.

ಏಶಿಯಾದ ಮತ್ತು ಬೇಥಾನ್ಯ/ಪೊಂತೀಯದ ರೋಮನ್ ಅಧಿಕಾರಿಗಳು ಸಿನೆಟ್‌ನಿಂದ ನೇಮಿಸಲ್ಪಡುತ್ತಿದ್ದರು. ಇವರು ಅಧಿಪತಿಗಳು ಎಂದು ಕರೆಯಲ್ಪಡುತ್ತಿದ್ದರು ಯಾಕೆಂದರೆ ಅವರು ಮಹಾ ಅಧಿಪತಿಯಾಗಿ ಕಾರ್ಯಮಾಡುತ್ತಿದ್ದು, ಮುಖ್ಯ ಆಡಳಿತಾತ್ಮಕ ಕಛೇರಿಯು ರೋಮಾದಲ್ಲಿತ್ತು. ಅಧಿಪತಿಗಳ ಅವಧಿ ಒಂದು ವರ್ಷ ಆಗಿತ್ತು. ಅವರು ತಮ್ಮ ಅವಧಿಯಲ್ಲಿ ಅವರು ಶ್ರೀಮಂತರಾಗಲು ಬಯಸುವವರೂ, ವಾಸ್ತವವಾಗಿ ಆದವರೂ ಆಗಿದ್ದರು. ಅಪೊಸ್ತಲರ ಕೃತ್ಯಗಳಲ್ಲಿ ಸೂಚಿಸಲ್ಪಟ್ಟ ಇಬ್ಬರು ಅಧಿಪತಿಗಳು ಸರ್ಗ್ಯೆಪೌಲ (13:7) ಮತ್ತು ಗಲಿಯೋನನು (18:12). ಹಿಂದೆ, ಶಾಂತಿಯುತ ಪ್ರಾಂತಗಳಾದಂತ ಏಶಿಯಾ ಮತ್ತು ಬೇಥಾನ್ಯ/ಪೊಂತಿಯ ಸೆನೆಟ್‌ದವರಿಂದ ಮಾಡಲ್ಪಟ್ಟ ಪ್ರಾಂತ್ಯಗಳು ಎಂದು ಕರೆಯುತ್ತಿದ್ದರು ಯಾಕೆಂದರೆ ಅವರು ರೋಮನ ಸೆನೆಟಿನ ಆಡಳಿತದ ಅಡಿಯಲ್ಲಿ ಇರುವವರಾಗಿದ್ದರು. ಎರಡೂ ಪ್ರಾಂತ್ಯಗಳು ತಮ್ಮಲ್ಲಿ ಅಸಂಖ್ಯವಾದ ಗ್ರೀಕ್ ಭಾಷೆಯ ಪಟ್ಟಣಗಳನ್ನು ಹೊಂದಿದ್ದವು. ಮೊದಲನೆಯ ಶತಮಾನದಲ್ಲಿ, ರೋಮನ್ ಸೆನೆಟ್‌ಗೆ ಏಶಿಯಾದ ಅಧಿಪತಿಯ ಸ್ಥಾನವನ್ನು ಕೊಡುವದಕ್ಕಿಂತ ಹೆಚ್ಚು ಉನ್ನತವಾದ ಬಹುಮಾನ ಮತ್ತೊಂದು ಇರಲಿಲ್ಲ.

ಆ ಸಮಯದಲ್ಲಿ ಗಲಾತ್ಯ ಮತ್ತು ಕಪ್ಪದೋಕ್ಯಗಳು ರೋಮನ್ ಸಾಮಂತ ಅರಸರಿಂದ ಆಳಲ್ಪಡುತ್ತಿದ್ದು, ಹೆರೋದ ಚಕ್ರವರ್ತಿಯಂತವರು ಪಾಲೇಸ್ತೀನಿನಲ್ಲಿ ಸಾಮಂತ ಅರಸರಾಗಿ ಇರುವವರಾಗಿದ್ದರು. ಕ್ರಿ.ಪೂ. 25ರಲ್ಲಿ, ಗಲಾತ್ಯವು ರೋಮನ ಪ್ರಾಂತ್ಯವಾಗಿ ರೂಪಿತವಾಯಿತು. ಅದೇ ಹಣೆಬರಹವು ಕ್ರಿ.ಶ. 17ರಲ್ಲಿ ಕಪ್ಪದೋಕ್ಯಕ್ಕೂ ಬಂದಿತು, ಎರಡು ಪ್ರಾಂತ್ಯಗಳಾದ ಗಲಾತ್ಯ ಮತ್ತು ಕಪ್ಪದೋಕ್ಯಗಳು, ಚಕ್ರವರ್ತಿಯ ನೇರ

ಆಡಳಿತಕ್ಕೆ ಒಳಪಟ್ಟಿರುತ್ತವೆ. ಯಾಕೆಂದರೆ ಅವುಗಳೇ ಚಕ್ರವರ್ತಿಯ ಗಡಿಗೆ ಸಮೀಪವಾದದ್ದರಿಂದ, ರೋಮನ್ ಸೈನ್ಯದಳವನ್ನು ಅಲ್ಲಿ ಬೀಡುಬಿಡಲು ಅಥವಾ ಸಮೀಪದಲ್ಲಿ ಇರಲು ಇರಿಸುತ್ತಿದ್ದರು. ಸೈನ್ಯದಳದ ಪ್ರಾಮಾಣಿಕತೆಯು ಚಕ್ರವರ್ತಿಗೆ ಇರುವುದಾಗಿತ್ತು ಹೊರತಾಗಿ ಸೆನೆಟ್‌ಗೆ ಅಲ್ಲ. ಚಕ್ರವರ್ತಿಯು ವೈಯಕ್ತಿಕ ಪ್ರತಿನಿಧಿಯನ್ನು ಗಲಾತ್ಯ ಮತ್ತು ಕಪ್ಪದೋಕ್ಯದಂಥ ಪ್ರಾಂತ್ಯಗಳನ್ನು ಆಳಲು ಕಳುಹಿಸುತ್ತಿದ್ದನು. ಅವುಗಳು ಸಾರ್ವಭೌಮ್ಯ ಪ್ರಾಂತ್ಯಗಳು ಎಂದು ಕರೆಯಲ್ಪಡುತ್ತಿದ್ದವು.

ಗಲಾತ್ಯವು ಗೌಲಸ್ ಎಂಬ ಬುಡಕಟ್ಟಿನಿಂದ ಹೆಸರನ್ನು ಪಡೆದಿದ್ದು ಕ್ರಿ.ಪೂ. ಎರಡನೆಯ ಶತಮಾನದ ಆರಂಭದಲ್ಲಿ, ಪ್ರಾಂತ್ಯದ ಉತ್ತರಭಾಗದಲ್ಲಿ ಸ್ಥಿತಿಹೊಂದಿತ್ತು. ಪ್ರಾಂತ್ಯದ ದಕ್ಷಿಣಭಾಗದಲ್ಲಿ, ಅಂತಿಯೋಕ್ಯ ಮತ್ತು ಲುಸ್ತ್ರದಂತಹ ಪಟ್ಟಣಗಳು ಇದ್ದು ಅವುಗಳ ಅಧಿಕಾರವು ಮತ್ತು ಭಾಷೆಯು ಅವುಗಳನ್ನು ಗ್ರೀಕೋರೋಮನ್ ಎಂದು ಗುರುತಿಸುವವು ಆಗಿದ್ದವು. ಕಪ್ಪದೋಕ್ಯವು ಹಿನ್ನೀರಿನ ಪ್ರದೇಶವನ್ನು ಹೊಂದಿತ್ತು. ಕಪ್ಪದೋಕ್ಯದ ಅನೇಕ ಜನರು ಬುಡಕಟ್ಟು ಜನಾಂಗದ ಜೊತೆ ಸೇರಲ್ಪಟ್ಟ ಸಣ್ಣ ಹಳ್ಳಿಗಳಲ್ಲಿ ವಾಸಿಸುವವರಾಗಿದ್ದರು.

ಸಾಮಾನ್ಯವಾಗಿ ರೋಮನ್ ಅಧಿಕಾರಿಗಳು, ಅಧಿಪತಿಗಳು ಅಥವಾ ಚಕ್ರವರ್ತಿಯ ರಾಯಭಾರಿಯೂ ಆಗಿದ್ದು, ಸಾಮ್ರಾಜ್ಯದ ಸಾಮಾನ್ಯ ಜನರೊಡನೆಯ ದಿನನಿತ್ಯದ ಜೀವಿತದಲ್ಲಿ ಸಣ್ಣ ಪಾತ್ರಗಳನ್ನು ವಹಿಸುವವರಾಗಿದ್ದರು. ಪಟ್ಟಣಗಳು ತಮ್ಮದೇ ಆದ ಕಟ್ಟಡದಳನ್ನು ಆರಕ್ಷಕದಳವನ್ನು ನಿರ್ವಹಿಸುವವರು, ಮತ್ತು ಸಾರ್ವಜನಿಕ ಕಾರ್ಯಗಳಿಗಾಗಿ ಕಾರ್ಯನಿರ್ವಹಿಸುವ ತೆರಿಗೆಗಳು ಮತ್ತು ರೋಮದ ಕರ ಇವುಗಳನ್ನು ಹೊಂದಿರುತ್ತಿದ್ದವು. ಇವುಗಳು ವಿವಿಧ ಸಮಿತಿಗಳಿಂದ ನೋಡಿಕೊಳ್ಳಲ್ಪಡುತ್ತಿದ್ದು, ಒಂದು ಸಾರ್ವಜನಿಕ ಕೆಲಸಕ್ಕಾಗಿ, ಇನ್ನೊಂದು ವ್ಯಾಪಾರದ ಮೇಲ್ವಿಚಾರಣೆಗಾಗಿ, ಮತ್ತು ಹಾಗೆಯೇ ಮುಂದೆ ಇರುವುದಾಗಿತ್ತು. ಪಟ್ಟಣಗಳು ರೋಮದಿಂದ ಅಲ್ಪವಾದ ಮಧ್ಯವರ್ತಿಯನ್ನು ಅಥವಾ ಸಹಾಯವನ್ನು ನಿರೀಕ್ಷಿಸುತ್ತಿತ್ತು ಮತ್ತು ಪಡೆಯುತ್ತಿದ್ದು, ಅಲ್ಲಿ ಶಾಂತಿಯು ಇರುವತನಕ ಮತ್ತು ತೆರಿಗೆಯು ಸಂದಾಯವಾಗುವತನಕ ಇರುವುದಾಗಿತ್ತು. ಆಸ್ಯ ಮತ್ತು ಬೇಥಾನ್ಯ/ಪೊಂತೀಯದಂತಹ ಸಮೃದ್ಧಿಯುತವಾದ ಪ್ರಾಂತಗಳಲ್ಲಿ, ಸಾಮ್ರಾಜ್ಯದ ಮೇರೆಯೊಳಕ್ಕೆ ಚೆನ್ನಾಗಿ ಇರುವವು ಆಗಿದ್ದವು, ಅಲ್ಲಿ ಯಾವುದೇ ಸೈನ್ಯದಳವು ಮತ್ತು ಕೆಲ ರೋಮ ಸೈನಿಕರು ಇರಲಿಲ್ಲ. ರೋಮದ ಅಧಿಕಾರ ಬಲವನ್ನು ಹೊಂದಿದೆ ಮತ್ತು ಅದನ್ನು ಪ್ರಯೋಗಿಸಲು ಹಿಂಜರಿಯದು ಎಂಬ ಅರಿವು ನಿವಾಸಿಗಳಿಗೆ ರೋಮದ ಯಾವುದೇ ಬೇಡಿಕೆಯನ್ನು ಶೀರ್ಘವಾಗಿ ಸಮ್ಮತಿಸುವವರಾ ಗಿದ್ದರು. 2:13-17ರಲ್ಲಿನ ಪೇತ್ರನ ಮಾತುಗಳು ಸರಕಾರದ ಬಹುಹಂತದ ಪದ್ಧತಿಯ ಹಿನ್ನೆಲೆ ವಿರುದ್ಧ ಬರೆಯಲ್ಪಟ್ಟಿವೆ. ಕೆಲ ಆಡಳಿತ ಶಾಹಿ ಅಧಿಕಾರಿಗಳು ರೋಮನ್ನರಾಗಿರುತ್ತಿದ್ದರು ಕೆಲವರು ಸ್ಥಳೀಯರಾಗಿರುತ್ತಿದ್ದರು.

ಪ್ರಾಂತ್ಯದ ಸಂಸ್ಕೃತಿ, ಧರ್ಮ ಮತ್ತು ಆರ್ಥಿಕತೆಗಳು 1 ಪೇತ್ರ ಪತ್ರಿಕೆಯ ಆರಂಭಿಕ ವಚನದಲ್ಲಿ ಸೂಚಿಸಲ್ಪಟ್ಟಿದ್ದು ಅವುಗಳು ಸಂಕೀರ್ಣವಾಗಿವೆ. ಪಟ್ಟಣಗಳಲ್ಲಿ ಗ್ರೀಕ್ ಸಂಸ್ಕೃತಿಯ ಗುಂಪುಗಳು (ಸಮೂಹ) ಇದ್ದವು. ಪಟ್ಟಣಗಳು ಆಸ್ಯದ ಉದ್ದಕ್ಕೂ ಮತ್ತು ಬೇಥಾನ್ಯ ಮತ್ತು ಪೊಂತಿಯದ ಕರಾವಳಿಯುದ್ದಕ್ಕೂ ಅಸಂಖ್ಯಾವಾಗಿ ಮತ್ತು ಸಮೃದ್ಧಿಯಾಗಿ ಇದ್ದವು. ಗಲಾತ್ಯ ಮತ್ತು ಕಪ್ಪದೋಕ್ಯದ ಹೃದಯಭಾಗದಲ್ಲಿ ಪಟ್ಟಣಗಳು ಕಡಿಮೆಯೂ ಮತ್ತು ಚಿಕ್ಕವೂ ಇದ್ದವು. ಪೇತ್ರನು ಪೌಲನಂತೆ, ಪಟ್ಟಣಗಳಲ್ಲಿ ಕ್ರಿಸ್ತನನ್ನು ಬೋಧಿಸುವ ತನ್ನ ಮೊದಲ ಶ್ರಮವನ್ನು ಮಾಡಿದ್ದಾದರೆ ಅದು ಯೋಗ್ಯವಾದದ್ದು ಆಗಿದೆ. ಪಟ್ಟಣಗಳು ಆರಂಭಿಕ ಕೇಳುವಿಕೆಯಲ್ಲಿಯ ಸುವಾರ್ತೆಯನ್ನು ಪಡೆದುಕೊಂಡ ಸಿನೆಗಾಗನಂತರ ವಾಣಿಜ್ಯಮಾರ್ಗಗಳ ಜೊತೆ ಇರುವುದಾಗಿತ್ತು. ಹಲವು ಬಾರಿ ಕ್ರಿಸ್ತನ ಮೊದಲ ರೂಪಾಂತರಿಗಳು ಸಿನೆಗಾರನಿಂದ ಬಂದವರಾಗಿದ್ದು, ಅವರು ಧಾರ್ಮಿಕ ಶ್ರದ್ಧೆಯುಳ್ಳ ಅನ್ಯಜನರನ್ನು ಅವರು ಹಿಂಬಾಲಿಸುವವರಾಗಿದ್ದು, ಕೆಲಪ್ರಕಟಣಗಳಲ್ಲಿ, ಯೆಹೂದಿಮಾರ್ಗಗಳನ್ನು ಗೌರವಿಸುವವರೂ ಮತ್ತು ಕ್ರಿಸ್ತೀಯ

ಬೋಧಕರು ಪರದೆಯ ಮೇಲೆ ಬರುವದಕ್ಕಿಂತ ಮುನ್ನ ಸೀನೆಗಾಗಿನೆ ಬಳಿಕೆಯಲ್ಲಿರುವವರು ಆಗಿದ್ದರು. ಆತನ ಕೆಲ ಓದುಗರಾದರೂ ವಿಗ್ರಹಾರಾಧನೆಯ ಪಟ್ಟಣಗಳಿಂದ ಬಂದವರು ಆಗಿದ್ದಾರೆ ಎಂದು ಪೇತ್ರನ ಮಾತುಗಳು ಸ್ಪಷ್ಟಪಡಿಸುವವು ಆಗಿವೆ (1:14, 18).

ಹೆಚ್ಚಾದ ಜನರೊಳಗೆ ಪೇತ್ರನ ಓದುಗರಾದಂಥವರು ಅನೇಕ ದೇವತೆಗಳನ್ನು ಆರಾಧಿಸುವವರಲ್ಲಿ ಇರುವವರಾಗಿದ್ದರು. ಅವರಲ್ಲಿ ಕೆಲವರು ಸಾಂಪ್ರದಾಯಿಕ ದೇವರುಗಳಾದ ಗ್ರೀಕ್ ಸರ್ವದೇವತೆಯನ್ನು ಆರಾಧಿಸುವವರು ಆಗಿದ್ದರು, ಆದರೆ ಇತರರು ವಿಚಿತ್ರ ಹೆಸರುಗಳಾದ ಮಾ, ಮೆನ್ ಅಥವಾ ಸೈಬೆಲ್‌ಗಳು ಆ ಮಣ್ಣಿನಲ್ಲಿ ಆಳವಾಗಿ ಬೇರೂರಿದ್ದವು. ಕೆಲ ಅಂಶಗಳಲ್ಲಿ ಧಾರ್ಮಿಕ ಆಚರಣೆಗಳು ಮಂತ್ರ ಮತ್ತು ಮೂಢನಂಬಿಕೆಗಳಲ್ಲಿ ಮಾಸಿಹೋಗಿತ್ತು. ಪೇತ್ರನಿಂದ ಸೂಚಿಸಲ್ಪಟ್ಟ ಮೂಡನಂಬಿಕೆಗಳು ಸಾಕಷ್ಟಿರುವ ಸ್ಥಳೀಯ ಜನರೊಳಗಿನ ಪ್ರಾಚೀನ ಜಗತ್ತಿನಿಂದ ಪುರಾವೆಗಳ ದೊಡ್ಡ ವ್ಯವಹಾರವು ಉಳಿಯಿತು. ಪವಿತ್ರ ಬುಗ್ಗೆಗಳು, ಪವಿತ್ರ ಮರಗಳ ತೋಪು, ಮತ್ತು ದೆವ್ವಗಳಿಂದ ಮತ್ತು ಆತ್ಮಗಳಿಂದ ಎಲ್ಲೆಡೆ ಹಲವುಬಾರಿ ಕಾಣುವ ಸ್ಥಳಗಳು ಇವು. ಕೆಲ ಸ್ಥಳಗಳು ಜನರು ತಮ್ಮ ರೋಗಗಳಿಂದ ಗುಣವಾಗಬಹುದಾದ ಸ್ಥಳಗಳು ಆಗಿದ್ದವು. ಇತರ ಸ್ಥಳಗಳಲ್ಲಿ, ಒಬ್ಬ ವ್ಯಕ್ತಿಯು ವೈರಿಯ ಬಗ್ಗೆ ಶಾಪವನ್ನು ಕಪ್ಪು ಹಲಗೆಯ ಮೇಲೆ ಬರೆದು, ನೆಲದಲ್ಲಿ ಹುಗಿದು, ಮತ್ತು ತನ್ನ ಆಜ್ಞೆಯನ್ನು ಅದ್ವಿತೀಯ ಶಕ್ತಿಯು ಮಾಡುವಂತೆ ಆಶಿಸುವವನು ಆಗಿದ್ದನು. ಪೌಲನ ಬೋಧನೆಯ ಪ್ರಭಾವದಿಂದ ಹೆಚ್ಚು ಸಂಖ್ಯೆಯ ಮಾಂತ್ರಿಕ ಪುಸ್ತಕಗಳನ್ನು ಒಟ್ಟುಗೂಡಿಸಿ ತಂದು ಮತ್ತು ಅವುಗಳನ್ನು ಸುಟ್ಟಂಥ ಎಫೆಸದ ಜನರನ್ನು ಹೊಸ ಒಡಂಬಡಿಕೆಯ ವಿಧ್ಯಾರ್ಥಿಗಳು ನೆನಪಿಟ್ಟುಕೊಳ್ಳಬಹುದು (ಅಪೊಸ್ತಲರ ಕೃತ್ಯಗಳು 19:19).

ಏಶಿಯಾ ಮೈನರ್ ಉದ್ದಕ್ಕೂ ದೇವರುಗಳ ಆರಾಧನೆಯು ಸಮುದಾಯ ಜೀವಿತದಲ್ಲಿ ಹಾಸುಹೊಕ್ಕಾಗಿತ್ತು. ದೇವರಿಗೆ ಸಮರ್ಪಿಸಿದ್ದ ಬಲಿಗಳು, ಹಬ್ಬಗಳು, ಅಥವಾ ಆಟಗಳ ಇವುಗಳಿಂದ ದೂರ ಉಳಿಯುವದು ಸಾರ್ವಜನಿಕ ಅಪರಾಧವಾಗಿತ್ತು. ಕ್ರೈಸ್ತರು ವಿಗ್ರಹಗಳ ಸಮಾಜದ ಉನ್ಮತ್ತತೆಯ ಉತ್ಸವದ ಆದಾಯಗಳಲ್ಲಿ ಅಥವಾ ಬಲಿಯ ಸಮರ್ಪನೆಯ ಆಚರಣೆಗಳಲ್ಲಿ ನೇರವಾದ ಸಂಘರ್ಷದಲ್ಲಿರುವವರಾಗಿದ್ದರು. ಸಾರ್ವಜನಿಕ ಮಾರುಕಟ್ಟೆ ಸ್ಥಳಗಳಲ್ಲಿ ಕೃಷಿಕ ಉನ್ಪನ್ನಗಳನ್ನು ಮಾರುವದು ಅಥವಾ ಚಮ್ಮಾರಿಕೆ ಮತ್ತು ಕುಂಬಾರಿಕೆಯಂತಹ ಚಿಕ್ಕ ಉದ್ಯಮಗಳ ಅಂಗಡಿಗಳು ಕ್ರೈಸ್ತರಿಗೆ ಕಷ್ಟದಾಯಕವಾಗಿದ್ದವು.

ಪೇತ್ರನು ಬಲ್ಲಂತಹ ಜಗತ್ತಿನಲ್ಲಿ ಕ್ರೈಸ್ತತ್ವವು ಹೊಸದಾದದ್ದೂ ಮತ್ತು ವಿಚಿತ್ರವಾದದ್ದೂ ಆಗಿತ್ತು. ತಮಗೆ ಬಲವಿದಷ್ಟು ಪ್ರಯತ್ನಿಸಿದರು, ಜನರ ಕಣ್ಣುಗಳು ಅವರ ಮೇಲೆ ಇರುವುದರಿಂದ ವಿಶ್ವಾಸಿಗಳು ತೊಂದರೆಯಲ್ಲಿ ಇರುವವರಾಗಿದ್ದರು. ಸ್ಥಳದಲ್ಲಿ ಕಳವು ಅಥವಾ ಮರಣವೇನಾದರೂ ಸಂಭವಿಸಿದ್ದನ್ನು ಯಾರಾದರೂ ವಿವರಿಸಿದಾಗ, ವಿಗ್ರಹಾರಾಧನೆಯ ಸಮಾಜವು ಪಟ್ಟಣದಲ್ಲಿನ ಹೊಸ ಧರ್ಮವನ್ನು ದೂಷಿಸುವಲ್ಲಿ ತೊಡಗುತ್ತಿತ್ತು. ಕ್ರೈಸ್ತರು ನಿಸ್ಸಂಷಯವಾಗಿ ಅದನ್ನು ಮೂಲದಿಂದಲೇ ಸಮಾಪ್ತಿಗೊಳಿಸುವವರಾಗಿದ್ದರು. ಭೂಕಂಪಗಳು ಅಥವಾ ಯಾವುದೇ ವಿನಾಶವು ಬಂದರೂ ಕ್ರೈಸ್ತರು ದೇವರಿಗೆ ಆಚರಣೆಯನ್ನು ಮಾಡುವದನ್ನು ಅಲಕ್ಷಿಸುವದೇ ಕಾರಣ ಎಂದು ಕ್ರೈಸ್ತರನ್ನು ದೂಷಿಸುವದು ಸಹಜವಾಗಿತ್ತು. ವಿಶ್ವಾಸಿಗಳು ಇರುವೆಡೆಯ ಜಗತ್ತಿನ ಪರಿಸ್ಥಿತಿಯಲ್ಲಿ ಕಂಡುಬರುವಾಗ ವಿಶ್ವಾಸಿಗಳ ಸಂಕಟದ ಕೇಂದ್ರವಾದ 1 ಪೇತ್ರ ಪತ್ರಿಕೆಯು ಜೀವಿತಕ್ಕೆ ಉಸಿರನ್ನು ಕೊಡುವುದಾಗಿದೆ.

## ಬರವಣಿಗೆ ಸ್ಥಳ ಮತ್ತು ದಿನಾಂಕ

"... ಬಾಬೇಲಿನಲ್ಲಿರುವ ಸಭೆಯು ನಿಮಗೆ ವಂದನೆ ಹೇಳುತ್ತದೆ" ಎಂದು 5:13ರಲ್ಲಿ ಪತ್ರದಲ್ಲಿ ಆತನು ಬರೆಯುವಾಗ ಪೇತ್ರನು ಬಹುಶಃ ಅಲ್ಲಿರಬಹುದು ಎಂದು ಪತ್ರವು ಒಂದೇ ಕುರುಹನ್ನು ಕೊಡುವದಾಗಿದೆ. ಹೇಳಿಕೆಯನ್ನು ಸ್ವಾಭಾವಿಕವಾಗಿ

ತೆಗೆದುಕೊಳ್ಳುವ ರೀತಿಯೆಂದರೆ ಪೇತ್ರನು ತಾನು ಬೆಬಿಲೋನ್ ಎಂದು ಕರೆಯುವ ಸ್ಥಳದಲ್ಲಿ ಇದ್ದನು. ತಮ್ಮ ವಂದನೆಗಳನ್ನು ತಿಳಿಸಿದ ಸ್ಥಳದವರು ಪೇತ್ರನೊಂದಿಗೆ ಇದ್ದರು ಎಂದು ಕಾಣುವದು ಎಂಬುದು ಇದರ ಅರ್ಥವಾಗಿದೆ (5:13ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ). ಬೆಬಿಲೋನ್ ಯುಫ್ರಟೀಸ್ ನದಿಯ ಮೇಲಿನ ಪ್ರಸಿದ್ಧ ನಗರವಾಗಿದ್ದು, ಸಾಮ್ರಾಜ್ಯದ ಕೇಂದ್ರ ಭಾಗವು ಕ್ರಿ.ಪೂ. 587ರಲ್ಲಿ ಯೆರೂಸಲೇಮನ್ನು ನಾಶಮಾಡಿತು ಮತ್ತು ಯೆಹೂದಿ ಜನರನ್ನು ದಾಸತ್ವಕ್ಕೆ ಕೊಂಡೊಯಿತು. ಮೊದಲ ವ್ಯಾಸಂಗವು "ಬ್ಯಾಬಿಲೋನ್" ಪದವನ್ನು ಪ್ರಸಿದ್ಧ ನಗರವನ್ನು ಸೂಚಿಸುವದಕ್ಕೆ ತೆಗೆದುಕೊಳ್ಳುವದಾಗಿತ್ತು. ಹೇಗೋ, ಹೆಸರನ್ನು ಅಕ್ಷರಸಹ ತೆಗೆದುಕೊಳ್ಳುವದರೊಡನೆ ಕೆಲ ಸಮಸ್ಯೆಗಳು ಇದ್ದವು.

ಮೊದಲನೆಯದಾಗಿ, ಆದಿಸಭೆಯ ಸಂಪ್ರದಾಯಗಳು ರೋಮಸಾಮ್ರಾಜ್ಯದ ಪೌರಾತ್ಯದ ಭಾಗವಲ್ಲ ಆದರೆ ಪಾಶ್ಚಾತ್ಯ ಭಾಗದ ಜೊತೆ ಪೇತ್ರನೊಡನೆ ಹೊಂದಿಕೊಳ್ಳುವಲ್ಲಿ ವ್ಯವಸ್ಥಿತ ವಾಗಿದ್ದವು. ಬೆಬಿಲೋನಿಯನ್ ದೂರಪ್ರಾಚ್ಯವಾಗಿತ್ತು. ಇದಕ್ಕೆ ಜೊತೆಯಾಗಿ, ಪ್ರಾಚೀನ ಜಗತ್ತಿನಿಂದ ಪುರಾವೆಗಳು ವಿರಳವಾಗಿದ್ದಾಗ, ಪೇತ್ರನು ಬರೆಯುವಾಗ ಬೆಬಿಲೋನಿಯನ್ ಮಹತ್ವವಿಲ್ಲದ ಹಳ್ಳಿಯಾಗಿ ಇರಲಿಲ್ಲ ಎಂದು ಇಲ್ಲಿ ಕಾಣುತ್ತದೆ.[8] ರೋಮದ ಅವನತಿಯನ್ನು ಸೂಚಿಸುವಾಗ ಪ್ರಕಟಣೆ 18:2ರಲ್ಲಿ ಅಪೊಸ್ತಲನಾದ ಯೋಹಾನನು ಬೆಬಿಲೋನಿನ ಶಿರೋನಾಮೆಯನ್ನು ಬಳಸಿದ್ದನ್ನು ನಾವು ಗಮನಿಸುವಾಗ, 1 ಪೇತ್ರದಲ್ಲಿನ ಬೆಬಿಲೋನಿನ ಆಧಾರವನ್ನು ಅಕ್ಷರಸಹವಾಗಿ ತೆಗೆದುಕೊಂಡಿದ್ದರಲ್ಲಿ ನಮಗೆ ಅಲ್ಪ ಖಚಿತತೆಯು ಇದೆ. ಹಳೆಯ ಒಡಂಬಡಿಕೆಯೊಡನೆಯ ಅದರ ಜನಪ್ರಿಯತೆಯ ಕಾರಣದಿಂದ, ಬೆಬಿಲೋನ ಕ್ರೈಸ್ತರಿಗೆ ವೈರತ್ವದ, ದೇವರಿಲ್ಲದಿರುವಿಕೆಯು, ಲಂಪುಟತೆಯ ಮತ್ತು ಹತ್ತಿಕ್ಕುವಿಕೆಯ ಚಿಹ್ನೆಯಾಗಿತ್ತು.[9] ಪ್ರಕಟಣೆಯಲ್ಲಿ ಯೋಹಾನನಂತೆ, ಪೇತ್ರನಿಗೂ ರೋಮವು ನೈತಿಕತೆಯಲ್ಲಿ, ಮತ್ತು ಆತ್ಮೀಕತೆಯಲ್ಲಿ ಬೆಬಿಲೋನಿನಂತೆ ಸ್ಪಷ್ಟವಾಗಿ ಕಂಡಿತು. ಪೇತ್ರನ ಓದುಗರು ಬೆಬಿಲೋನನ್ನು ರೋಮದ ಜೊತೆ ಗುರುತಿಸಬೇಕಾದರೆ ಈಗ ನಾವು ನ್ಯೂಯಾರ್ಕ್ ಪಟ್ಟಣವನ್ನು ಬಿಗ್ ಆಪಲ್ ಜೊತೆ ಗುರುತಿಸುವಂತೆ ಇದು ಇಲಿಸುವುದಾಗಿದೆ.

ರೋಮ್ ಕ್ಯಾಥೋಲಿಕ್‌ನ್ನು ದ್ವೇಷಿಸುವವರು, ಪೇತ್ರನು ಎಂದಿಗೂ ರೋಮದಲ್ಲಿ ಇರಲಿಲ್ಲ ಎಂದು ಹೇಳುವ ಮೂಲಕ ಪೇತ್ರನು ಆತನು ಮೊದಲ ಪೋಪನ್ನು ಆಗಲು ಅರ್ಹನಲ್ಲ, ಎಂದು ಪ್ರತಿಪಾದಿಸುತ್ತಾರೆ ಎಂದು ಹೇಳಲು ಸಾಧ್ಯ. ಪುನರುಜ್ಜೀವನ ಕಾಲದಲ್ಲಿ ಕೆಲವರು 1 ಪೇತ್ರ 5:13ರಲ್ಲಿನ "ಬೆಬಿಲೋನ್" ಎಂಬ ಪದವನ್ನು ಅಕ್ಷರಸಹ ತೆಗೆದುಕೊಂಡು, ಪೇತ್ರನು ತನ್ನ ಮೊದಲ ಪತ್ರವನ್ನು ಜಗತ್ತಿನ ಮೊದಲನೆಯ ಶತಮಾನದಲ್ಲಿ ಪೌರಾತ್ಯ ಭಾಗದಿಂದ ಬರೆದಿದ್ದಾನೆ ಎಂದು ವಾದವನ್ನು ಕಾದುಕೊಂಡಿದ್ದಾರೆ. ಈ ದೃಷ್ಟಿಕೋನವು ಆಧುನಿಕ ಸಮಯದವರೆಗೆ ಮುಂದುವರೆಯುತ್ತಾ ಬಂದಿದೆ. ಹೇಗೋ, ಪುರಾವೆಗಳು ಇದಕ್ಕೆ ವಿರುದ್ಧವಾಗಿವೆ. ಇತರ ಸಂಗತಿಗಳೊಳಗೆ ಸೀಲನು ಮತ್ತು ಮಾರ್ಕ (5:12, 13) ಎಂಬ ಹೆಸರುಗಳು ಪಾಶ್ಚಾತ್ಯ ಸಭೆಯೊಡನೆ ಇರುವವು ಆಗಿವೆ. ಪೇತ್ರನ ಮರಣವನ್ನು ಸೂಚಿಸುವಾಗ ಅದು ಅಪೊಸ್ತಲನು ರೋಮಾದಲ್ಲಿ ಮರಣಿಸಿದನು ಎಂಬುದು ಮೊದಲ ನಾಲ್ಕು ಶತಮಾನಗಳ ಸಭೆಗಳಲ್ಲಿ ಲೇಖಕನ ಸಹಜವಾದ ಸಾಕ್ಷಿಯು ಆಗಿದೆ.

ನೀರೊ ಚಕ್ರವರ್ತಿಯಾಗಿರುವಾಗ, ಪೇತ್ರ ಮತ್ತು ಪೌಲರು ಸುಮಾರು ಒಂದೇ ಸಮಯದಲ್ಲಿ ಕೊಲ್ಲಲ್ಪಟ್ಟರು ಎಂದು ನಾಲ್ಕನೆಯ ಶತಮಾನದ ಸಭೆಯ ಇತಿಹಾಸಕಾರನಾದ ಯುಸೂಬಿಯಸ್ ತಿಳಿಯುತ್ತಾನೆ. ನೀರೋ ಕ್ರಿ.ಶ 68ರಲ್ಲಿ ಆತ್ಮಹತ್ಯ ಮಾಡಿಕೊಂಡನು. ಪೇತ್ರನು ರೋಮದಲ್ಲಿ ಎಷ್ಟು ಸಮಯದವರೆಗೆ ಇದ್ದನು ಎಂದು ತಿಳಿಯುವದು ಅಸಾಧ್ಯವಾಗಿ ರುವಾಗ, ಏಶಿಯಾದಲ್ಲಿನ ಕ್ರೈಸ್ತರು ಅನುಭವಿಸುತ್ತಿರುವ ಸಂಕಟದ ಬಗೆಗಿನ ಮಾಹಿತಿಯನ್ನು ಪಡೆಯುವದಕ್ಕಾಗಿ ಆತನಿಗೆ ಸ್ವಲ್ಪ ಸಮಯ ಅಲ್ಲಿರುವದು ಅವಶ್ಯವಾಗಿತ್ತು. ಆತನ ಓದುಗರು ಹಿಂಸೆಯನ್ನು ಅನುಭವಿಸುವದಕ್ಕಿಂತ ಮುಂಚಿತವಾಗಿಯೇ ಕ್ರೈಸ್ತರಾಗಿದ್ದರು. ರೋಮದಲ್ಲಿ

ಹಿಂಸೆಯು ಹುಟ್ಟಿತು ಎಂಬುದಕ್ಕೆ ಯಾವುದೇ ಸೂಚನೆಯೂ ಇಲ್ಲ; ಆ ಸಮಯದ ದಿನಗಳಲ್ಲಿ ಸಾಮ್ರಾಜ್ಯದ ಉದ್ದಕ್ಕೂ ಯಾವುದೇ ಹಿಂಸೆಯು ಇರಲಿಲ್ಲ. ಹೇಗೋ, ಹೊಸ ಧರ್ಮಕ್ಕಾಗಿನ ಸ್ಥಳೀಯರ ಅಸಹನೆ ಕ್ರೈಸ್ತರು ಬಹಿಷ್ಕಾರವನ್ನು ಮತ್ತು ಆರ್ಥಿಕ ಒತ್ತಡವನ್ನು ಎದುರಿಸುವಂಥದ್ದು ಆರಂಭವಾಗಿದ್ದರಲ್ಲಿ ಯಾವುದೇ ಸಂಶಯವಿರಲಿಲ್ಲ. ಅಂತಿಮವಾಗಿ, ಹಿರಿಯರನ್ನು ಆರಿಸುವಲ್ಲಿ ಪೇತ್ರನು ಸಂಬೋಧಿಸಿದಂಥ ಪ್ರೌಢ ಅಂಶಗಳು ಸಭೆಗಳಿಗೆ ಇವು ಕೆಲ ಸಮಯವನ್ನು ತೆಗೆದುಕೊಂಡಿತು (ನೋಡಿರಿ 5:1). ದಿನಾಂಕದ ಬಗ್ಗೆ ನಮಗೆ ನಿಶ್ಚಿತತೆಯು ಇಲ್ಲದಿರುವಾಗ, 1 ಪೇತ್ರ ಪತ್ರಿಕೆಯು ಕ್ರಿ.ಶ. 65ರ ಸಮೀಪದಲ್ಲಿ ಬರೆಯಲ್ಪಟ್ಟಿತು ಎಂದು ಹೇಳುವದು ಉತ್ತಮ ಊಹೆಯಾಗಿದೆ.

## ಪತ್ರದ ವಿನ್ಯಾಸ

ಆರಂಭಿಕ ಸಂಬೋಧನೆಯ ನಂತರ (1:1, 2), ಪೇತ್ರನು ತನ್ನ ಮನಸ್ಸನ್ನು ಮತ್ತು ತನ್ನ ಓದುಗರ ಮನಸ್ಸನ್ನು ಬಿಡುಗಡೆಯತ್ತ, ನಿರೀಕ್ಷೆ, ಮತ್ತು ಕಷ್ಟದ ಸಮಯದುದ್ದಕ್ಕೂ ತಾಳಿಕೊಳ್ಳುವ ವಾಗ್ದಾನದೆಡೆಗೆ ಬಿಗಿದೆಳೆದನು. ವಿವರಣೆಯ ನಂತರ ವಿವರಣೆಯು ಓದುಗರಿಗೆ ಅಂತ್ಯದ ಸಮಯದ ಪ್ರತಿಬಿಂಬವನ್ನು ತಂದಾಗ, ನಿರೀಕ್ಷೆಯು ಅಂತಿಮ ತಾಸು ಸಿದ್ಧಿಸುವುದಾಗಿದ್ದು ಅದು: "ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ಹುಟ್ಟಿಸುವದು" (1:3), "ಕ್ಷಯಗಳಿಲ್ಲದ ಬಾಧ್ಯತೆ" (1:4). "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವದು" (1:5), "ಆತ್ಮರಕ್ಷಣೆ" (1:9), "ಈ ರಕ್ಷಣೆ" (1:10), "ಯೇಸು ಕ್ರಿಸ್ತನ ಪ್ರತ್ಯಕ್ಷತೆ" (1:13), "ಈ ಲೋಕದಲ್ಲಿ ನಿಮ್ಮ ಪ್ರವಾಸ ಕಾಲ" (1:17), "ನಿಮಗೆ ಬಿಡುಗಡೆಯಾದದ್ದು .... ನಶಿಸಿ ಹೋಗುವ ವಸ್ತುಗಳಿಂದಲ್ಲ" (1:18), "ಅಂತ್ಯಕಾಲದಲ್ಲಿ" (1:20), "ನಿಮ್ಮ ನಂಬಿಕೆಯೂ ನಿರೀಕ್ಷೆಯೂ ದೇವರಲ್ಲಿ ನೆಲೆಗೊಂಡಿವೆ" (1:21).

ಪತ್ರದ ಮೊದಲ ಪ್ರಮುಖ ಭಾಗಗಳು 1:3-2:10. ಕ್ರಿಸ್ತನನ್ನು ಅಪ್ಪಿಕೊಳ್ಳುವ ಅರ್ಥವು ಏನು ಎಂದು ತನ್ನ ಓದುಗರು ತಿಳಿಯಬೇಕೆಂದು ಪೇತ್ರನು ಬಯಸಿದ್ದನು. ಆತನನ್ನು ಅರಿಯುವ ಮುನ್ನ, ಅವರು ಕತ್ತಲೆಯಲ್ಲಿ ಇರುವವರಾಗಿದ್ದರು, ದುರಾಶೆಗಳನ್ನು ಅನುಸರಿಸಿ ನಡೆಯುವವರಾಗಿದ್ದರು (1:14). ಕ್ರಿಸ್ತನಲ್ಲಿ ಅವರು ಆರಿಸಿಕೊಳ್ಳಲ್ಪಟ್ಟ ಜನಾಂಗವೂ, ದೇವರ ಸ್ವಂತ ಜನರೂ ಆದರು (1:1, 2; 2:9, 10). ಅವರು ಹೊಸದಾಗಿ ಹುಟ್ಟಿದ ಕಾರಣದಿಂದ, ಜೀವಿತವು, ಸೇವೆಯನ್ನು, ಒಂದು ಉದ್ದೇಶವನ್ನೂ, ಮತ್ತು ಒಂದು ಕೊನೆಯನ್ನು ಹೊಂದಿತು. ತಮ್ಮ ಹಿಂದಿನ ವ್ಯರ್ಥ ಜೀವಿತದಿಂದ ಬಿಡುಗಡೆಯಾಗಿ, ಅವರು ಕರ್ತನೊಡನೆ ಐಕ್ಯತೆಯನ್ನು ಎದುರುನೋಡುವವರಾದರು.

ಕರ್ತನ ಮರಳುವಿಕೆಯಲ್ಲಿ ತಮ್ಮ ನಿರೀಕ್ಷೆಯನ್ನು ತನ್ನ ಓದುಗರಿಗೆ ನೆನಪಿಸುವಿಕೆಯನ್ನು ಹೊಂದಿ, ಪೇತ್ರನು ಹೆಚ್ಚಾದ ಸಂಪೂರ್ಣ ಕ್ರಿಸ್ತೀಯ ಜೀವಿತಕ್ಕೆ ತನ್ನ ಓದುಗರಿಗೆ ಮಾರ್ಗದರ್ಶನ ಮಾಡುವಂತಹ ತನ್ನ ಬೋಧನೆಯತ್ತ ತಿರುಗುತ್ತಾನೆ. 2:11-4:11, ಪತ್ರದ ಈ ಭಾಗವು, ಅತ್ಯವಶ್ಯಕವಾದವುಗಳಿಂದ ತುಂಬಿದ್ದು, ಯಾಕೋಬನ ಪತ್ರಿಕೆಯಲ್ಲಿ ಸಹಜವಾಗಿರುವದಕ್ಕೆ ಸಮೀಪವಾದಂಥದ್ದು ಆಗಿದ್ದು ಅದು "ನಿಮ್ಮ ನಡವಳಿಕೆಯು ... ಯೋಗ್ಯವಾಗಿರಲಿ" (2:12); "ಕರ್ತನ ನಿಮಿತ್ತ ಅಧೀನರಾಗಿರಿ" (2:13); "ಸ್ವತಂತ್ರ್ಯರಂತೆ ನಡೆದುಕೊಳ್ಳಿರಿ" (2:16); "ಎಲ್ಲರನ್ನೂ ಸನ್ಮಾನಿಸಿರಿ" (2:17); ಮತ್ತು ಹಾಗೆಯೇ ಮುಂದಿದೆ. ಈ ಭಾಗದಲ್ಲಿ ಕರ್ತನ ಮರಳುವಿಕೆಯು ಮರೆತುಬಿಟ್ಟರೆ ಎಂಬಂತೆ ಇದು ಅಲ್ಲ (2:12; 4:7). ಕರ್ತನ ಮರಳುವಿಕೆಯು ಪೇತ್ರನು ಮಾಡಿದಂತಹ ಉಪದೇಶದ ಅಡಿಪಾಯವಾಗಿದೆ. ಅಥವಾ ಇದು ಪೇತ್ರನು ಸಂಕಟದಲ್ಲಿರುವ ತನ್ನ ಓದುಗರನ್ನು ಅಲಕ್ಷಿಸುತ್ತಿದ್ದಾನೆಯೋ (3:13, 14). ಸಂಕಟವು ನಂಬಿಗಸ್ತಿಕೆಯ ಪುನಶ್ಚೇತನದ ಮೂಲವಾಗಿದೆ (3:15).

4:12-5:11, ಪತ್ರದ ಅಂತಿಮ ಭಾಗದಲ್ಲಿ, ಪೇತ್ರನು 1:3-2:10ರಲ್ಲಿ ತಾನು

ಉದ್ದೇಶಿಸಿದ ಅಂಶದತ್ತ ತಿರುಗುತ್ತಾನೆ. ಸಂಕಟವು ಹೊಸದಾದ ತೀರ್ವತೆಯತ್ತ ತಿರುಗುವುದಾಗಿದೆ. 4:11 ಸಾಮಾನ್ಯವಾಗಿ ದಾಖನೆಯ ಅಂತ್ಯದಲ್ಲಿ ಕಂಡುಬರುವಂತಹ ಅಂತ್ಯಾಶೀರ್ವಾದದಿಂದ ಮುಗಿದಿದ್ದಲಿಂದ, ಮತ್ತು 4:12-5:11ರ ಭಾಷೆಯು ಬಲವಾದ ಹಿಂಸೆಯನ್ನು ಸೂಚಿಸುವದಲಿಂದ, ಪೇತ್ರನು ತನ್ನ ಪತ್ರವನ್ನು 4:11ರಲ್ಲಿ ಮುಗಿಸುವ ಉದ್ದೇಶ ವನ್ನು ಹೊಂದಿದ್ದನು ಎಂದು ಸೂಚಿಸುವವರಾಗಿದ್ದಾರೆ. ಪೇತ್ರ 1 ಪತ್ರಿಕೆಯಲ್ಲಿ ಎರಡೂ ಆವೃತ್ತಿಗಳು ಇವೆ ಎಂದು ಒಬ್ಬ ಪಂಡಿತರು ಕಂಡುಕೊಂಡಿದ್ದಾರೆ. ಕ್ರೈಸ್ತಲಿಗಾಗಿನ ಮೊದಲ ಆವೃತ್ತಿಯು ಅಲ್ಪವಾದ ಹಿಂಸೆಯನ್ನು ಅನುಭವಿಸುವವಲಿಗಾಗಿ ಇದೆ. ಆ ವಿಶ್ವಾಸಿಗಳು 1 ಪೇತ್ರ 1:1-4:11ನ್ನು ಪಡೆದರು. ಎರಡನೆಯ ಆವೃತ್ತಿಯು ಅತಿಯಾದ ಹಿಂಸೆಯನ್ನು ತಾಳಿಕೊಳ್ಳುವಂಥ ಕ್ರೈಸ್ತಲಿಗಾಗಿ ಇರುವುದಾಗಿದೆ. ಅವರು 1 ಪೇತ್ರ 1:1, 2 ಮತ್ತು 1 ಪೇತ್ರ 4:12-5:14ನ್ನು ಪಡೆದರು.[10] ಪೇತ್ರನು ಪತ್ರವನ್ನು ನಾಶಪಡಿಸಿದ ನಂತರ, ತನ್ನ ಓದುಗರ ಭಯಂಕರವಾದ ಸಂಕಟದ ಹೊಸಸ್ಫೋಟದ ಜೊತೆಯಾದ ಮಾಹಿತಿಯನ್ನು ಆತನು ಪಡೆದನು ಎಂದು ಇತರರು ವಾದಮಾಡುವುದುಂಟು. ಅದರ ಜೊತೆ ಆತನು ಬರವಣಿಗೆಯತ್ತ ಮರಳಿದನು ಮತ್ತು 4:12-5:11ನ್ನು ಉಪಸಂಹಾರದ ಭಾಗವಾಗಿ ಸೇಲಿಸಿದನು.[11] ಎರಡೂ ಸೂಚನೆಗಳು ಗಣನೆಗೆ ಯೋಗ್ಯವಾಗಿರುವಾಗ, ಪೇತ್ರನು ಬರೆದಂತವುಗಳ ಬಗೆಗಿನ ನಮ್ಮ ಜ್ಞಾನ ಸ್ಥಿತಿಯು ಗಟ್ಟಿಯಾದ ಸಮಾರೋಪವು ಬಲು ಸೀಮಿತವಾಗಿದೆ. 1 ಪೇತ್ರ 4:12-5:11 ಹಿಂದೆ ಈ ಪತ್ರದಲ್ಲಿ ಸ್ಪಷ್ಟವಾಗಿರದ ಪೇತ್ರನ ಓದುಗರ ಸಂಕಟವನ್ನು ಅದರ ತೀರ್ವತೆಯೊಡನೆ ನಮ್ಮ ಮುಂದೆ ತರುವದು ಇಲ್ಲಿ ಸ್ಪಷ್ಟವಾಗಿದೆ.

ಕ್ರಿಸ್ತನಾಗಿ ಸಂಕಟಪಟ್ಟದ್ದಕ್ಕಾಗಿ ಅವರಲ್ಲಿ ಒಬ್ಬರು ಮುಖಭಂಗಿತವಾದರು ಎಂದು ಪೇತ್ರನು ಭರವಸೆಯನ್ನು ಕೊಡುವವನಾಗಿದ್ದಾನೆ (4:16). ಇದು ಹೊಸ ಒಡಂಬಡಿಕೆಯಲ್ಲಿನ "ಕ್ರೈಸ್ತನು" ಎಂಬ ಪದಕ್ಕಿರುವ ಮೂರು ಪ್ರಸಂಗಗಳಲ್ಲಿ ಒಂದಾಗಿದೆ (ನೋಡಿಲಿ ಅಪೊಸ್ತಲರ ಕೃತ್ಯಗಳು 11:26; 26:28). ಅಂಥ ಬಾಹ್ಯ ಒತ್ತಡಗಳ ಎದುಲಿಸುವಿಕೆಯಲ್ಲಿ ಕ್ರೈಸ್ತರು ಹೇಗೆ ಪ್ರತಿಕ್ರಯಿಸುವವರಾಗಿದ್ದಾರೆ? "ದೇವರ ಚಿತ್ತಾನುಸಾರ ಬಾಧೆಪಡುವವರು ಒಳ್ಳೆ ಯದನ್ನು ಮಾಡುವವರಾಗಿದ್ದು ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಕರ್ತನಿಗೆ ಒಪ್ಪಿಸುವಲ್ಲಿ" ವಿಶ್ವಾಸವಿಡುವ ಮೂಲಕವೇ (4:19). ಅಪೊಸ್ತಲನು ಹಿಲಿಯಲಿಗೆ ಸಹಾಯಕವಾದ ಸೂಚನೆಯ ಮಾತುಗಳನ್ನು ಸೇಲಿಸಿದ್ದಾನೆ (5:1-4), ನಮ್ರತೆಯ ಮತ್ತು ಸಮಚಿತ್ತದ ಉಪದೇಶವನ್ನು ತನ್ನ ಓದುಗಲಿಗೆ ಮಾಡಿದ್ದಾನೆ (5:5-11), ಮತ್ತು ನಂತರ ತನ್ನ ಪತ್ರವನ್ನು ಅಂತ್ಯದೆಡೆಗೆ ತಂದಿದ್ದಾನೆ (5:12-14). ಮುಂದಿರುವ ರೂಪರೇಷೆಯು ಈ ಪತ್ರವನ್ನು ವಿಶ್ಲೇಷಣೆ ಮಾಡುವದಕ್ಕೆ ಸಹಾಯಕಾಲಿಯಾಗಿದೆ.

## ರೂಪರೇಶೆ

I. ವಂದನೆಗಳು: ಆತ್ಮನಿಂದ ಪಲಿಶುದ್ಧರಾದಂಥವಲಿಗೆ (1:1, 2)

II. ರಕ್ಷಣೆ, ನಂಬಿಕೆಯ ಪ್ರತಿಫಲ (1:3-2:10)
- A. "ನಿಲೀಕ್ಷೆಯ ಜೀವಿತದೊಡನೆ ಹೊಸದಾಗಿ ಹುಟ್ಟುವದು" (1:3-5)
- B. "ವಿಧವಾದ ಕಷ್ಟಗಳಿಂದ ಕಂಗೆಡುವದು" (1:6-9)
- C. ಪ್ರವಾದಿಗಳ ಮೂಲಕ ಸೇವೆ (1:10-12)
- D. ಪಲಿಶುದ್ಧ ಜನರು (1:13-16)
- E. ನಿಮ್ಮನ್ನು ಭಯದಲ್ಲಿ ನಡೆಸುವದು (1:17-21)
- F. ಕ್ಷಯಿಸಲಾರದ ಬೀಜವಾಗಿ ಹುಟ್ಟುವದು (1:22-25)
- G. "ನವಜಾತ ಶಿಶುವಿನಂತೆ ಇರುವದು" (2:1-3)

H. ಕ್ರಿಸ್ತನು, ಸಜ್ಜೀವ ಬಂಡೆಯಾಗಿದ್ದಾನೆ; ಕ್ರೈಸ್ತರು ಆತ್ಮೀಕ ಮನೆಯವರಾಗಿದ್ದಾರೆ (2:4-8)
I. ಕತ್ತಲೆಯಿಂದ ಬೆಳಕಿನೊಡನೆ ಕರೆದನು (2:9, 10)

III. ದೇವರ ಸಂಕಟಪಡುವ ಮಕ್ಕಳ ಹಾಗೆ ಇರುವದು (2:11-4:11)
A. "ಪರದೇಶಿಗಳು ಮತ್ತು ಅಪರಿಚಿತರು" (2:11, 12)
B. ಒಪ್ಪಿಸಿಕೊಳ್ಳುವದು: ಕ್ರಿಸ್ತೀಯ ಜೀವಿತದ ಪ್ರಮುಖ ಭಾಗ (2:13-3:7)
1. ಆಳುವ ಅಧಿಕಾರಿಗಳಿಗೆ ಅಧೀನರಾಗಿರಿ (2:13-17)
2. ಒಡೆಯರಿಗೆ ಅಧೀನರಾಗಿರಿ (2:18-20)
3. ಶಿಲುಬೆಯ ಮೇಲಿನ ಕ್ರಿಸ್ತನಿಗೆ ಅಧೀನರಾಗಿರಿ (2:21-25)
4. ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು (3:1-6)
5. ತಮ್ಮ ಗಂಡಂದಿರ ಮೂಲಕ ಸ್ತ್ರೀಯರನ್ನು ಆಧರಿಸುವದು (3:7)
C. ನೀತಿವಂತಿಕೆಗಾಗಿ ಸಂಕಟಪಡುವವರು ಧನ್ಯರು (3:8-17)
1. ದೇವರ ಆಶೀರ್ವಾದದ ಮೂಲಕ ಪವಿತ್ರ ಜೀವಿತವನ್ನು ಆಶಿಸುವದು (3:8-12)
2. ನಿನ್ನ ಹೃದಯದಲ್ಲಿ ಪರಿಶುದ್ಧಗೊಳಿಸುವ ಕ್ರಿಸ್ತನು (3:13-17)
D. ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು (3:18-22)
E. ಶಾರೀರಕವಾದವುಗಳಿಗೆ ವಿರುದ್ಧವಾಗಿ ನಿಮ್ಮನ್ನು ಇರಿಸುವದು (4:1-3)
F. ವಿಗ್ರಹಾರಾಧನೆಗೆ ಉತ್ತರಿಸುವದು (4:4-6)
G. ಅಂತ್ಯದ ಸಮೀಪಿಸುವಿಕೆ (4:7-11).

IV. ಕ್ರಿಸ್ತನಿಗಾಗಿ ಸಂಕಟವನ್ನು ಹಂಚಿಕೊಳ್ಳುವದು (4:12-5:11)
A. ಕ್ರಿಸ್ತನಿಗಾಗಿ ಸಂಕಟವನ್ನು ಹಂಚಿಕೊಳ್ಳುವದು (4:12-16)
B. ನಂಬಿಗಸ್ತನಾದ ಸೃಷ್ಟಿಕರ್ತನಲ್ಲಿ ವಿಶ್ವಾಸವಿಡುವ ಆತ್ಮ (4:17-19)
C. ಹಿರಿಯರಿಗೆ ಪ್ರೋತ್ಸಾಹ (5:1-4)
D. ನಮ್ರತೆಯನ್ನು ಹೊದ್ದುಕೊಳ್ಳುವದು (5:5-8)
E. ಜಗತ್ತಿನುದ್ದಕ್ಕೂ ನಿಮ್ಮ ಸಹೋದರತ್ವ (5:9-11)

V. ಸಮಾಪ್ತಿಯಾ ಷರಾ (5:12-14)

## ಅನ್ವಯ

1 ಪೇತ್ರ ಪತ್ರಿಕೆಯ ಸಂದೇಶವು ತಮ್ಮ ಜೀವಿತವನ್ನು ಯಾವ ರೀತಿಯಲ್ಲಿ ಮುಟ್ಟುವದು, ಅವರ ನಂಬಿಕೆಗೆ ಯಾವ ರೀತಿಯಾಗಿ ಕಾಣಿಕೆಯನ್ನು ಕೊಡುವದು, ಮತ್ತು ಪಾಪದಿಂದ ತಿರುಗುವಂತೆ ಮತ್ತು ನೀತಿವಂತಿಕೆಯ ಜೀವಿತಕ್ಕಾಗಿ ಯಾವ ರೀತಿಯಲ್ಲಿ ಪ್ರೇರೇಪಿಸುವದು ಎಂಬುದನ್ನು ಕ್ರೈಸ್ತರು ತಿಳಿಯಬಯಸುತ್ತಾರೆ. ಈ ತರದ ಪಾಠಗಳು 1 ಪೇತ್ರದ ವಚನದಿಂದ ವಚನಕ್ಕೆ ಮತ್ತು ನಿಶ್ಚಿತವಾಗಿ ಅಕ್ಷರದಿಂದ ಅಕ್ಷರಕ್ಕೆ ಹರಿಯುವವು ಆಗಿವೆ. 1 ಪೇತ್ರದ ಸಮಗ್ರ ಪರಿಶೀಲನೆಯಿಂದ ಇನ್ನೂ ಕೆಲವು ಪಾಠಗಳನ್ನು ಕಲಿಯಬಹುದು.

**ಕರ್ತನೆಡೆಗೆ ತಿರುಗುವದು**

ಕರ್ತನು ಮರಳುವಿಕೆಯಲ್ಲಿ ಜೊತೆಯಾಗುವ ಘಟನೆಗಳ ವಿವರವಾದ ವಿವರಣೆಗೆ ಹೊಸ

ಒಡಂಬಡಿಕೆಯ ಯಾವ ಲೇಖಕರು ಹೋಗಿಲ್ಲ. ಬದಲಾಗಿ, ಕ್ರೈಸ್ತರು ಆತನ ಮರಳುವಿಕೆಯ ಉದ್ದೇಶಾರ್ಥವನ್ನು ಗಂಭೀರವಾಗಿ ಮತ್ತು ವಿಚಾರಪೂರಕವಾಗಿ ಪರಿಗಣಿಸಬೇಕು ಎಂದು ಪೇತ್ರ ಮತ್ತು ಇತರರು ಒತ್ತಾಯಿಸಿದ್ದಾರೆ.

(1) ಕರ್ತನು ಮರಳಿ ಬರುವುದರಿಂದ, ಆಶಾಭಂಗ, ಚಿಂತೆ ಮತ್ತು ಜೀವಿತದ ನೀರಾಶತ್ವ ಇವುಗಳನ್ನು ಸಹಿಸಿಕೊಳ್ಳುವದು ಸುಲಭವಾದದ್ದು ಆಗಿದೆ. ದೇಹವು ವಯಸ್ಕತೆಯತ್ತ ತಿರುಗಿದಾಗ, ಪಾಪವನ್ನು ಬದಿಗಿಡುವದು ಅಸಾಧ್ಯವಾದಾಗ, ಅತಿಯಾದ ದ್ವೇಷ ಮತ್ತು ಕಹಿತನ ಜಗತಿನಲ್ಲಿರುವಾಗ, ಅವೆಲ್ಲವುಗಳು ಅಂತ್ಯಕ್ಕೆ ಬರುವವು ಆಗಿವೆ. ಜೀವಿತದ ಕಷ್ಟಗಳು ಕೇವಲ ಅಲ್ಪಸಮಯದವರೆಗೆ ಇರುವವು ಆಗಿವೆ. ಕ್ರಿಸ್ತನಲ್ಲಿ ತಮ್ಮ ನಂಬಿಕೆಯಿಡುವವರಿಗೆ ನಿತ್ಯತ್ವವು ಎದುರಿಗೆ ಇರುವುದಾಗಿದೆ (1:6).

(2) ಕರ್ತನು ಮರಳಿ ಬರುವುದರಿಂದ, ಕೊರತೆಯಲ್ಲಿರುವ ತನ್ನ ನೆರೆಯವನಿಗೆ ಒಬ್ಬನು ಸಹಾಯಿಸುವನೋ ಇಲ್ಲವೋ ಇದು ಇಲ್ಲಿನ ಸಂಗತಿಯಾಗಿದೆ. ಒಬ್ಬನು ಸತ್ಯವನ್ನು ನುಡಿಯುವನೋ ಇಲ್ಲವೋ ಮತ್ತು ಇತರರೊಡನೆ ಯೋಗ್ಯವಾಗಿ ವ್ಯವಹರಿಸುವನೋ ಇಲ್ಲವೋ ಎಂಬುದು ಇಲ್ಲಿನ ಸಂಗತಿಯಾಗಿದೆ. ಜೀವಿತವು ಗುರಿಯತ್ತ ಸಾಗುತ್ತಿರುವದರಿಂದ ಅದಕ್ಕೆ ಅರ್ಥ ಮತ್ತು ಮಾರ್ಗ ಇರುವುದಾಗಿದೆ.

(3) ಕರ್ತನು ಮರಳಿ ಬರುವುದರಿಂದ, ದೇವರು ಈ ಜಗತ್ತಿನ ಸಂಗತಿಗಳಲ್ಲಿ ನೇರವಾಗಿ ಪಾಲ್ಗೊಂಡಿದ್ದಾನೆ ಎಂಬ ಭರವಸೆಯು ಕ್ರೈಸ್ತರಿಗೆ ಇರುವುದಾಗಿದೆ. ಆತನು ತನ್ನ ಮಕ್ಕಳನ್ನು ಬಿಟ್ಟುಬಿಡನು ಅಥವಾ ಮರೆತುಬಿಡನು (5:7). ಕ್ರೈಸ್ತರು ಕ್ರಿಸ್ತನ ಮೊದಲನೆಯ ಬರೋಣ ಮತ್ತು ಎರಡನೆಯ ಬರೋಣದ ಮಧ್ಯ ಜೀವಿಸುವವರಾಗಿದ್ದಾರೆ. ಈಗ ಅವರು ರಾಜ್ಯವನ್ನು ಹೊಂದಿದ್ದಾರೆ, ಹೌದು ಅಲ್ಲಿ ಒಂದು ರಾಜ್ಯವಿದೆ ಅದು ಪ್ರಕಟಿಸಲ್ಪಡಬೇಕಾಗಿದೆ.

**ಸಂಕಟ ಮತ್ತು ಸಂತೋಷ**

ಕೆಲಸಾರಿ ಮುಗ್ದಜನರು ಯಾಕೆ ಸಂಕಟವನ್ನು ಅನುಭವಿಸುತ್ತಾರೆ ಎಂದು ಬೈಬಲಿನಲ್ಲಿ 1 ಪೇತ್ರ ಅಥವಾ ಯಾವುದೇ ಪುಸ್ತಕವು ವಿವರವಾದ ವಿವರಣೆಯನ್ನು ಕೊಡುವದಿಲ್ಲ. ಪರಿಗಣನೆಗಾಗಿ ಕೆಲ ಅಂಶಗಳನ್ನು ಮೊದಲ ಪೇತ್ರ ಪತ್ರಿಕೆಯು ಕ್ರೈಸ್ತರಿಗೆ ನೀಡುವುದಾಗಿದೆ.

(1) ಒಳ್ಳೆಯ ಜನರು ಯಾವುದೇ ತಪ್ಪಿಲ್ಲದಿದ್ದರೂ ತಾವೇ ಸಂಕಟಪಡುತ್ತಾರೆ ಯಾಕೆಂದರೆ ಜಗತ್ತು ಸೈತಾನನ ಪ್ರಭಾವದ ಅಡಿಯಲ್ಲಿ ಇರುವುದಾಗಿದೆ. ಸೈತಾನನು ಆತ್ಮವನ್ನು ಕಬಳಿಸಲು ಹೊಂಚುಹಾಕುವವನಾಗಿದ್ದಾನೆ (5:8). ಜಗತ್ತಿನ ಹೆಚ್ಚಿನ ಸಂಖ್ಯೆಯವರು ಸೈತಾನನ ವಶದ ಅಡಿಯಲ್ಲಿ ಹಿಡಿಯಲ್ಪಟ್ಟಿದ್ದಾರೆ. ಸೈತಾನನಿಗೆ ಒಳಗಾದವರು ಕ್ರಿಸ್ತನ ಒಳ್ಳೆಯತನಕ್ಕಾಗಿ ತಮ್ಮ ಜೀವವನ್ನು ಕೊಡಲ್ಪಟ್ಟವರನ್ನು ವಿರೋಧಿಸುವವರೂ ಮತ್ತು ಹಿಂಸಿಸುವವರೂ ಆಗಿರುತ್ತಾರೆ.

(2) ಕೆಲ ಸಂಕಟಗಳು ಪಾಪದ ಪರಿಣಾಮದಿಂದ ಸಂಭವಿಸುತ್ತದೆ. ಇದು ಹೀಗಿರುವಾಗ, ಕ್ರೈಸ್ತರು ಪಶ್ಚಾತ್ತಾಪಪಡಲೇಬೇಕು. ಕರುಣೆಯಲ್ಲಿ ಐಶ್ವರ್ಯವಂತನಾದ ದೇವರು, ಕ್ಷಮಿಸುವವನಾಗಿದ್ದಾನೆ. ಕೆಲಸಂಗತಿಗಳಲ್ಲಿ ತನ್ನ ಮಕ್ಕಳು ಪಶ್ಚಾತ್ತಾಪ ಪಟ್ಟಾಗ ಮತ್ತು ಆತನೆಡೆಗೆ ತಿರುಗಿಕೊಂಡಾಗ ಈ ಜೀವಿತದಲ್ಲಿನ ಸಂಕಟವು ದೇವರಿಂದ ಎತ್ತಲ್ಪಡುವುದಾಗಿದೆ. ಪೇತ್ರನು ತನ್ನ ಓದುಗರಿಗೆ ಹೀಗೆ ಮಾಡಲು ಒತ್ತಾಯಿಸುವವನಾಗಿದ್ದು ಇದರಿಂದ ತಪ್ಪಾದ ಕಾರ್ಯಗಳಿಗಾಗಿ ಅವರು ಎಂದಿಗೂ ಸಂಕಟಪಡದೇ ಜೀವಿಸುವವರಾಗುತ್ತಾರೆ (2:11, 12; 4:15, 16).

(3) ಕ್ರೈಸ್ತರು ಸಂಕಟಪಡುವಾಗ, ಅವರು ಯೇಸುವನ್ನೇ ಉದಾಹರಣೆಯಾಗಿ ಅನುಸರಿಸುವವರಾಗಿದ್ದಾರೆ. ಯೇಸು ಜಗತ್ತಿಗಾಗಿ ಸಂಕಟಪಟ್ಟನು (2:24). ಆತನ ಅನುಯಾಯಿಗಳನ್ನು ಆತನ ಸಂಕಟವನ್ನು ಹಂಚಿಕೊಂಡಿದ್ದಾದರೆ ಆ ದಿಶೆಯಲ್ಲಿ ಜನರು ನಂಬಿಕೆಯಲ್ಲಿ ಬರಬಹುದಾಗಿದೆ ಎಂಬಂಥ ಅಂಶವು ಇಲ್ಲಿದೆ.

**ಪೇತ್ರನ ಬಗ್ಗೆ ವರ್ಣಮಯ ಕಥೆ**

ಒಂದು ಕನಸನ್ನು ಹೊಂದಿದ ಒಬ್ಬ ಕ್ರೈಸ್ತನ ಕಥೆಯು ಇಲ್ಲಿದೆ. ಒಬ್ಬ ದೇವದೂತನ ಮೂಲಕ ಪರಲೋಕಕ್ಕೆ ಪ್ರಯಾಣವನ್ನು ಏರ್ಪಡಿಸುವ ಕನಸನ್ನು ಆತನು ತಾನೇ ಕಂಡನು. ಆತನು ನಡೆಯುತ್ತಿದ್ದಂತೆ ಆತನು ಮನಮೆಚ್ಚುವಂತಹ ದೃಶ್ಯಗಳನ್ನು ಮತ್ತು ದೇವರಿಗೆ ತನ್ನ ಸ್ತೋತ್ರಗಳನ್ನು ಸಲ್ಲಿಸುತ್ತಿದ್ದಂತೆಯೇ ಆತನು ತನ್ನ ಬಲಗಡೆಯಲ್ಲಿ ಗುಂಪು ಸುತ್ತುವರೆದದ್ದನ್ನು ಕಂಡನು. ಆತನು ತನ್ನ ಮಾರ್ಗದರ್ಶಕನಾದ ದೇವದೂತನಿಗೆ "ಈ ಜನರು ಯಾರು ಮತ್ತು ಅವರು ಸುತ್ತುವರೆದಿರುವಂಥ ಆ ವ್ಯಕ್ತಿಯು ಯಾರು?" ಎಂದು ಕೇಳಿದನು. ಆ ದೇವದೂತನು "ನೀನು ನೋಡುತ್ತಿರುವ ಮಾತನಾಡುತ್ತಿದ್ದಂಥ ಮನುಷ್ಯನು ಅಪೊಸ್ತಲನಾದ ಪೌಲನು. ಆತನು ಯೇಸು ಕ್ರಿಸ್ತನ ಮೂಲಕ ತಿಳಿಯುವಂತೆ ಮಾಡಿದ ದೇವರ ಅದ್ಭುತವಾದ ಕರುಣೆಯನ್ನು ವಿವರಿಸುತ್ತಿದ್ದಾನೆ" ಎಂದು ಹೇಳಿದನು. "ಈ ಗುಂಪು ನನಗಿಂತ ಹೆಚ್ಚು ತಿಳಿದವರು ಮತ್ತು ನೀತಿವಂತರು ಆಗಿದ್ದಾರೆ. ನಾನು ಅದರಲ್ಲಿ ಸೇರಲಾರೆನು" ಎಂದು ಆ ಮನುಷ್ಯನು ತನ್ನಲ್ಲೇ ಯೋಚಿಸಿದನು.

ಅವರು ಸ್ವಲ್ಪ ಮುಂದೆ ಪ್ರಯಾಣಿಸಿದರು, ಮತ್ತು ಆತನ ಬಲಗಡೆ ಇನ್ನೊಂದು ಗುಂಪು ಒಬ್ಬ ಬೋಧಕನ ಸುತ್ತಲೂ ನೆರೆದಿತ್ತು. ಆತನು ತಿರುಗಿ ತನ್ನ ಮಾರ್ಗದರ್ಶಿಗೆ "ಇವನು ಯಾರು?" ಎಂದು ಕೇಳಿದನು. ಆಗ ದೇವದೂತನು, "ಅಲ್ಲಿ ಮಾತನಾಡುತ್ತಿರುವಂಥ ಮನುಷ್ಯನು ಅಪೊಸ್ತಲನಾದ ಯೆಹೋವನು. ಆತನು ಕರ್ತನ ಎದೆಯ ಮೇಲೆ ಕಳೆದಂಥ ರಾತ್ರಿಯ ಬಗೆಗೆ ಸ್ಮರಿಸಿಕೊಳ್ಳುತ್ತಿದ್ದಾನೆ. ಆತನು ಪ್ರತಿಯೊಬ್ಬರ ಬಗೆಗಿನ ದೇವರ ಪ್ರೀತಿಯ ಬಗ್ಗೆ ಗುಂಪಿಗೆ ಹೇಳುತ್ತಿದ್ದಾನೆ" ಎಂದನು. ಆ ಮನುಷ್ಯನು ಅಲ್ಲಿಂದ ಸಾಗಿದನು. ಈ ಜನರು ಭಕ್ತಿಪೂರ್ವಕ ಹಾಗೂ ಒಳ್ಳೆಯವರೂ ಆಗಿದ್ದರು. ತಾನು ಇವರಲ್ಲಿಯೂ ಸೇರಲಿಕ್ಕಿಲ್ಲ ಎಂದು ಆತನು ಅಂದುಕೊಂಡನು.

ಅವರು ನಡೆಯುತ್ತಿದ್ದಂತೆಯೇ, ಮೂರನೆಯ ಗುಂಪೊಂದು ಅಲ್ಲಿ ನೆರದಿರುವದನ್ನು ಆತನು ಕಂಡನು. "ಈ ಜನರು ಯಾರು?" ಎಂದು ಆತನು ಅದೇ ಪ್ರಶ್ನೆಯನ್ನು ಕೇಳಿದನು. ಆ ಮಾರ್ಗದರ್ಶಿಯು "ಆತನು ಅಪೊಸ್ತಲನಾದ ಪೇತ್ರನು. ಈ ಜನರಿಗೆ ಆ ರಾತ್ರಿ ತಾನು ಕರ್ತನಿಗೆ ಮಾಡಿದ ದ್ರೋಹದ ಬಗ್ಗೆ ಹೇಳುತ್ತಿದ್ದಾನೆ" ಎಂದನು. ಆಗ ತಾನು "ನಾನು ಇಲ್ಲಿಯೇ ನಿಂತುಕೊಳ್ಳುವದು ಉತ್ತಮ. ಪೇತ್ರನು ಏನು ಹೇಳುತ್ತಿದ್ದಾನೆಯೋ ಅದು ನನಗೂ ಸಂಬಂಧಿಸಿದೆ" ತನ್ನಲ್ಲಿಯೇ ಯೋಚಿಸಿದನು. ಈ ಕಥೆಯು ವರ್ಣಮಯವಾಗಿದೆ, ಆದರೆ ಕ್ರೈಸ್ತರು ಹೊಂದಿರುವ ನಂಬಿಕೆ ಮತ್ತು ಸಂಶಯ, ಅಪೊಸ್ತಲನಾದ ಪೇತ್ರನ ಉತ್ಸಾಹ ಮತ್ತು ನಿರ್ಬಲತೆಗಳ ಆಕರ್ಷಣೆಯವಾದ ವಿವರಗಳನ್ನು ಹೊಂದಿದೆ.

---

ಟಿಪ್ಪಣಿಗಳು

[1]By Frank L. Cross, *1 Peter: A Pascal Liturgy* (London: A. R. Mowbray & Co. Ltd., 1954) 1 ಪೇತ್ರದ ಈ ರೀತಿಯ ವ್ಯಾಖ್ಯಾನಿಸುವಿಕೆಯು ಇತರವುಗಳಲ್ಲಿಯೇ ಸುಸಂಸ್ಕೃತವಾದದ್ದು ಆಗಿದೆ. ಆತನು ಕೆಲ ಹಿಂಬಾಲಕರನ್ನು ಹೊಂದಿದ್ದಾನೆ. [2]John H. Elliott, "ಮಲ ಮಕ್ಕಳ ಪುನರ್ವಸತಿಯ ಒಂದು ವ್ಯಾಖ್ಯಾನ: 1 ಪೇತ್ರ ಇತ್ತೀಚಿನ ಸಂಶೋಧನೆ," *Journal of Biblical Literature* 95 (June 1976): 243–54. After 1976. [3]ಆದಿಸಭೆಯ ಸಾಕ್ಷಿಗೋಸ್ಕರ ನೋಡಿರಿ J. Ramsey Michaels, *1 Peter*, Word Biblical Commentary, vol. 49 (Waco, Tex.: Word Books, 1988), xxxii. [4]ಪೇತ್ರನು ರೋಮದಲ್ಲಿ ಮರಣಿಸಿದನು ಎಂಬ ಪುರಾವೆಯು ಸಮಾಯಾನುಸಾರವಾದದ್ದು ಮತ್ತು ಬಲವಾದದ್ದು ಆಗಿದೆ. ಪೇತ್ರನು ಈ ಪಟ್ಟಣದಲ್ಲಿ ಸಂಹರಿಸಲ್ಪಟ್ಟನು ರೋಮದ ಕ್ಲೆಮೆಂಟನು ಇದನ್ನು ಸೂಚಿಸುವವನಾಗಿದ್ದಾನೆ. ಇಗ್ನೀಶಿಯಸ್‌ನು ಕುಡಾ ಇದನ್ನೇ ಸೂಚಿಸುವವನಾಗಿದ್ದಾನೆ. ಯೆಸೂಬಿಯಸ್ ರೋಮಾ ಗಾಯನು ಮತ್ತು ಕೊರಿಂಥದ Dionysius

ಕೂಡಾ ಅದೇ ರೀತಿಯಲ್ಲಿ ಎಂದು ವ್ಯಾಖ್ಯಾನಿಸಿದ್ದಾನೆ (Eusebius *Ecclesiastical History* 2.25). [5]ಪತ್ರವನ್ನು ತೆಗೆದುಕೊಂಡು ಹೋಗುತ್ತಿದ್ದವನು ಸೀಲನು ಹೊರತಾಗಿ ಅದನ್ನು ತೆಗೆದುಕೊಂಡು ಬಂದ ಶಾಸ್ತ್ರಿಗಳು ಅಲ್ಲ ಎಂದು Wayne A. Grudemರು ಬಲವಾಗಿ ಪ್ರತಿಪಾದಿಸುತ್ತಾರೆ. (Wayne A. Grudem, *The First Epistle of Peter: An Introduction and Commentary,* Tyndale New Testament Commentaries, vol. 17 [Grand Rapids, Mich.: Wm. B. Eerdmans Publishing Co., 1988], 23–24. ಈ ಪತ್ರವನ್ನು ತೆಗೆದುಕೊಂಡು ಹೋದವನು ಲೇಖಕನಾದ ಸೀಲನೇ ಎಂದು Edward Gordon Selwyn ರು ಸಮಾಜಾಯಿಸಿ ಪ್ರತಿಪಾದಿಸುತ್ತಾರೆ. 1 ಪೇತ್ರದ ಹೋಲಿಕೆಯು ಉತ್ಕೃಷ್ಟವಾದ koine ಗ್ರೀಕ್ ಪದ್ಧತಿಯ ಜೊತೆ ಇದ್ದು ಸೀಲನಾಗಲೀ ಅಥವಾ ಯಾರೇ ಆಗಲೀ, ಆ ಅಪೊಸ್ತಲನು ಲೇಖಕನ ಜೊತೆ ಸಂಪರ್ಕದಲ್ಲಿದ್ದವನು ಎಂದು ಅವಶ್ಯಕವಾಗಿ ಸೂಚಿಸುವುದಾಗಿದೆ. ಗಲಿಲಾಯದ ಮೀನುಗಾರರು ಸಮಯವನ್ನು ಸಿಕ್ಕಿಸಿಕೊಳ್ಳಬಹುದಿತ್ತು ಅಥವಾ 1 ಪೇತ್ರದಲ್ಲಿನ ನಿಶ್ಚಿತ ಭಾಷೆಯ ಪ್ರಬುದ್ಧತೆಯನ್ನು ಹೊಂದಬಹುದಿತ್ತು ಇದು ದುರದುಷ್ಟಕರವಾದದ್ದಾಗಿದೆ. (Edward Gordon Selwyn, *The First Epistle of St. Peter: The Greek Text, with Introduction, Notes, and Essays,* Thornapple Commentaries, 2d ed. [London: Macmillan & Co., 1947; reprint Grand Rapids, Mich.: Baker Book House, 1981], 11–16.) [6]ವಿಮರ್ಶಕರ ಆಸಕ್ತಿಯ ಮೇರೆಗೆ 2 ಪೇತ್ರ 1:18ರ ರೂಪಾಂತರದಲ್ಲಿ ಪೇತ್ರನ ವ್ಯಾಖ್ಯಾನವು ಪೇತ್ರನು ಲೇಖಕನು ಅಲ್ಲ ಎಂಬುದಕ್ಕೆ ಪುರಾವೆಯಾಗಿದೆ. ಅಪೊಸ್ತಲನು ಸುವಾರ್ತೆಯಲ್ಲಿದ್ದಂಥ ಅಂಥ ಯಾವುದೇ ಒಂದು ಘಟನೆಯನ್ನು ಕೃತ್ರಿಮವಾಗಿ ಸೇರಿಸಿದ್ದನ್ನು ಹೊಂದಿಲ್ಲ ಎಂದು ಅವರು ವಾದಿ ಸುವವರಾಗಿದ್ದಾರೆ. ವಿಮರ್ಷಕರು ಎರಡು ರೀತಿಯನ್ನು ಹೊಂದಿರಬಾರದು. [7]ಅಪೊಸ್ತಲರ ಕೃತ್ಯದ ಲೇಖಕನಿಗಿಂತ ಮೊದಲೇ ಪೌಲನು ಕಾಣಿಸಿಕೊಂಡಿದ್ದರೆ, ಇಂದು ಅರ್ಥದಲ್ಲಿ, ಅಪೊಸ್ತಲರ ಕೃತ್ಯವು ಹೊಸ ಒಡಂಬಡಿಕೆಯಲ್ಲಿನ ಪೇತ್ರನಿಗೆ ಕೊನೆಯ ಆಧಾರವಾಗುತಿತ್ತು. ಹೇಗೋ, ಅಪೊಸ್ತಲರ ಕೃತ್ಯದ ಕಥೆಯ ವಿವರಣೆಯು, ಪೌಲನು ಪೇತ್ರನಿಗೆ ಸೂಚಿಸುವಾಗಿನ ತನ್ನ ಪತ್ರದಲ್ಲಿ ಸಂಗತಿಯು ನಂತರದಲ್ಲಿ ಅಪೊಸ್ತಲರ ಕೃತ್ಯಗಳು 15ರಲ್ಲಿ ಸಾರಾಂಶೀಕೃತವಾಗಿದೆ. [8]Strabo *Geography* 16.1.5. [9]In Zechariah 5:5–11, "ದುಷ್ಟತನ" ಎಪ್ಪ ಮತ್ತು "ಶಿನಾರಿನ" ಎರಡು ರೆಕ್ಕೆಗಳನ್ನು ಹೊಂದಿದ ಸ್ತ್ರೀಯು ಹೊತ್ತುಕೊಂಡಿದ್ದು ಎಂಬುದರ ಬದಲಾಗಿ ಇರಿಸಿದ್ದು ಆಗಿದೆ. ಶಿನಾರು ಅದು ಬೆಬಿಲೋನ್ ಆಗಿದ್ದು ಅದು ಎಲ್ಲತರದ ದುಷ್ಟತನಹೊಂದಿದ್ದು ಮತ್ತು ಇಸ್ರಾಯೇಲನಿಂದ ಸ್ವಚ್ಛಮಾಡಲ್ಪಟ್ಟಿದ್ದು ಆಗಿದೆ. [10]C.F. D. Moule, "The Nature and Purpose of 1 Peter," *New Testament Studies* 3 (November 1956): 10.

[11]See, for example, J. W. C. Wand, *The General Epistles of St. Peter and St. Jude* (London: Methuen & Co., Ltd., 1934), 13.